ಆದ್ದರಿಂದ ಯೋಗಿಗಳು ಮನ, ವಚನ, ಕಾಯಗಳಿಂದ ಸಕಲ ತತ್ವಗಳನ್ನು ತ್ಯಜಿಸಿ ಕೇವಲ ತನ್ನಾತ್ಮನ ಶುದ್ಧಸ್ವರೂಪವನ್ನು ಗ್ರಹಣೆಮಾಡತಕ್ಕದ್ದು.

ಭಾವಾರ್ಥ :- ಕ್ರಮವಾಗಿ ಸಪ್ತತತ್ವಗಳ ವರ್ಣನೆಯ ವಿಷಯವಾಗಿ ಸ್ಪಷ್ಟೀಕರಿಸಿದ್ದಾಯಿತು. ತನ್ನ ಶುದ್ಧಸ್ವರೂಪಮಯ ಆತ್ಮನಲ್ಲದೆ ಅನ್ಯ ತತ್ವಗಳು ತ್ಯಾಜ್ಯವಾಗಿರುತ್ತವೆ. ಅವೆಲ್ಲವು ನನ್ನಿಂದ ಭಿನ್ನವಾಗಿರುತ್ತವೆ. ಆದ್ದರಿಂದ ಶುದ್ಧೋಪಯೋಗವನ್ನು ಧಾರಣೆಮಾಡುವ ಮತ್ತು ತನ್ನ ಶುದ್ಧಸ್ವರೂಪದಲ್ಲಿ ತನ್ಮಯನಾಗುವ ಮುನಿವರ್ಯರು ಮನ, ವಚನ, ಕಾಯಗಳೆಂಬ ಯೋಗ ತ್ರಯಗಳಿಂದ ಎಲ್ಲ ತತ್ವಗಳನ್ನು ತ್ಯಜಿಸಿ, ಚೈತನ್ಯಮೂರ್ತಿ ಆತ್ಮನನ್ನು ಗ್ರಹಣೆಮಾಡಿ ಅದರಲ್ಲಿಯೇ ಸದಾ ನಿರತರಾಗಿರಬೇಕು. ಇದೇ ಆತ್ಮಸುಖದ ಮುಖ್ಯ ಸಾಧನವಾಗಿರುತ್ತದೆ. ಇದು ಸಪ್ತತತ್ವನಿರೂಪಣೆಯಾಗಿರುತ್ತದೆ.

ಆಶೆಪಡುತ್ತಿದ್ದರೂ ಧನಾದಿಗಳ ಪ್ರಾಪ್ತಿ ಆಗದಿರುವ ಕಾರಣ.

ಪ್ರಶ್ನೆ :- ಕುರ್ವಂತ ಏವಾಪಿ ಧನಾದಿಯಾಂಚಾಂ ।
ಕಥಂ ಧನಾದಿಂ ನ ಚ ತೇ ಲಭಂತೇ ॥

ಅರ್ಥ :- ಹೇ ಕರುಣಾನಿಧೇ! ಧನಾದಿಗಳನ್ನು ಯಾಚನೆಮಾಡುತ್ತಿದ್ದರೂ ಧನಾದಿಗಳ ಪ್ರಾಪ್ತಿಯಾಗದಿರಲು ಕಾರಣವೇನೆಂಬುದನ್ನು ವಿವರಿಸಬೇಕು.

ಉತ್ತರ :- ಯೇ ಕೇಪಿ ಜೀವಾಶ್ಚ ಯಥೈವ ಬೀಜಂ ।
ವಪಂತಿ ಭೂಮೌ ಸಮಯೇ ಹಿ ತೇಪಿ ॥
ತಾದೃಕ್ ಫಲಂ ನಿಶ್ಚಯತೋ ಲಭಂತೇ ।
ನ ಕೇವಲಂ ಯಾಚನತಃ ಕದಾಪಿ ॥೨೦೦॥

ಜ್ಞಾತ್ವೇತಿ ಭಕ್ತ್ಯಾ ಸುಕೃತಿಂಕುರುಷ್ವ ।
ಕೌ ಕೇವಲಂ ಯಾಚಕ ಏವ ನ ಸ್ಯಾಃ ॥
ತತೋ ಭವೇ ದೇವ ತವೇಷ್ಟಸಿದ್ಧಿಃ ।
ನಶ್ಯೇತ್ತಥಾಶಾ ಸುಖಶಾಂತಿಹರ್ತ್ರೀ ॥೨೦೧॥



ಅರ್ಥ :- ಜಗತ್ತಿನಲ್ಲಿ ಈ ಜೀವಗಳು ಯಾವ ವಿಧದ ಬೀಜವನ್ನು ಭೂಮಿಯಲ್ಲಿ ಬಿತ್ತುವರೋ ಅಂತಹ ಫಲವನ್ನೇ ಪಡೆಯುವರು. ಕೇವಲ ಯಾಚನೆಮಾಡಿಕೊಂಡಿರುವುದರಿಂದ ಯಾವ ವಿಧದ ಫಲವು ದೊರೆಯಲಾರದು. ಈ ವಿಚಾರವನ್ನು ತಿಳಿದು ಸಂಸಾರದಲ್ಲಿ ಭಕ್ತಿಪೂರ್ವಕ ಪುಣ್ಯಕಾರ್ಯಗಳನ್ನು ಮಾಡಬೇಕು. ಯಾಚನೆಯಿಂದ ಯಾವ ಕಾರ್ಯಗಳೂ ಲಭಿಸಲಾರವು. ಪುಣ್ಯಕಾರ್ಯಗಳನ್ನು ಮಾಡುವುದರಿಂದಲೇ ಇಷ್ಟಾರ್ಥಸಿದ್ಧಿಯು ಆಗುವುದು. ಸುಖಶಾಂತಿಯನ್ನು ನಷ್ಟಭ್ರಷ್ಟಗೊಳಿಸುವ ಆಶಾ ಪಿಶಾಚಿಯು ನಾಶವಾಗುವುದು.

ಭಾವಾರ್ಥ :- ಕೃಷೀಕಾರನು ತನ್ನ ಜಮೀನಿನಲ್ಲಿ ಎಂತಹ ಯಾವ ಜಾತಿಯ ಬೀಜವನ್ನು ಬಿತ್ತುವನೋ ಅಂತಹ ಫಲವನ್ನೇ ಪಡೆಯುವನು. ಯಾಚನೆಯಿಂದ ಯಾವುದೂ ಸಿಕ್ಕದಿರುವಂತೆ ಈ ಜೀವಗಳು ಮಾಡಿದ್ದ ಕಾರ್ಯದ ಫಲವನ್ನೇ ಪಡೆಯುತ್ತಾರೆ. ಯಾರು ಪ್ರತಿನಿತ್ಯವು ದೇವಪೂಜೆ, ಸತ್ಪಾತ್ರದಾನ ಮೊದಲಾದ ಪುಣ್ಯಕಾರ್ಯಗಳನ್ನು ಮಾಡುವುದರ ಫಲವಾಗಿ ಈ ಲೋಕದಲ್ಲಿ ಸಕಲ ವಿಭೂತಿಗಳ, ಪರಲೋಕದಲ್ಲಿಯೂ ಕೂಡಾ ಸ್ವರ್ಗಾದಿ ಸುಖಗಳ, ಪ್ರಾಪ್ತಿಯಾಗುತ್ತದೆ. ಕ್ರಮವಾಗಿ ಮೋಕ್ಷಸುಖದ ಪ್ರಾಪ್ತಿಯೂ ಆಗುವುದು. ಪುಣ್ಯಕಾರ್ಯಗಳನ್ನು ಮಾಡುವುದರಿಂದಲೇ ಆತ್ಮನ ಯಥಾರ್ಥ ಸ್ವರೂಪವನ್ನು ತಿಳಿಯಲು ಅನುಕೂಲವಾಗುವುದು. ವೀತರಾಗ ನಿರ್ಗ್ರಂಥ ಗುರುಗಳ ಸೇವೆಯನ್ನು ಮಾಡುವುದರಿಂದ ಜ್ಞಾನಪ್ರಾಪ್ತಿಯು, ಸಂಸಾರ ಪರಂಪರೆಯನ್ನು ವೃದ್ಧಿಗೊಳಿಸುವ ಆಶಾಪಾಶಗಳ ನಾಶವೂ ಆಗುವುದು. ಆದರಿಂದ ಶುಭೋಪಯೋಗದ ವೃದ್ಧಿಯೂ ಮತ್ತು ಶುದ್ಧೋಪಯೋಗ ಪ್ರಾಪ್ತಿಯೂ ಆಗುವುದು.

ಮುಂದಕ್ಕೆ ಶುದ್ಧ ಚೈತನ್ಯಸ್ವರೂಪದ ಸುಖವಿಲ್ಲದ ಸಕಲ ಕ್ರಿಯೆಗಳು ನಿರರ್ಥಕವೆಂದೇ ಸ್ಪಷ್ಟೀಕರಿಸುತ್ತಾರೆ.

ವ್ರತೇನ ಕಿಂವಾ ವಿನಯೇನ ಕಿಂವಾ ।
ಮಾನೇನ ಕಿಂವಾ ಮನಸಾಪಿ ಕಿಂವಾ ॥

ಧ್ಯಾನೇನ ಕಿಂವಾ ಖಲುಕಿಂಚ ಧೃತ್ವಾ ।
ತಾಪೇನ ಕಿಂವಾ ತಪಸಾಪಿ ಕಿಂವಾ ॥೨೦೨॥

ಯೋಗೇನ ಕಿಂವಾ ಸ್ಮರಣೇನ ಕಿಂವಾ ।
ಬಲೇನ ಕಿಂವಾ ಬಲಿನಾಪಿ ಕಿಂವಾ ॥
ಯಾಗೇನ ಕಿಂವಾ ಯಜನೇನ ಕಿಂವಾ ।
ಕ್ರೋಧೇನ ಕಿಂವಾ ಕೃತಿನಾಪಿ ಕಿಂವಾ ॥೨೦೩॥

ಶಾಸ್ತ್ರೇಣ ಕಿಂವಾ ಮನನೇನ ಕಿಂವಾ ।
ಯಂತ್ರೇಣ ಕಿಂವಾ ಯತಿನಾಪಿ ಕಿಂವಾ ॥
ಮಂತ್ರೇಣ ಕಿಂವಾ ಮುನಿನಾಪಿ ಕಿಂವಾ ।
ಕಾಲೇನ ಕಿಂವಾ ಕಲಹೇನ ಕಿಂವಾ ॥೨೦೪॥

ರತ್ನೇನ ಕಿಂವಾ ರಜಸಾಪಿ ಕಿಂವಾ ।
ಮರ್ತ್ಯೇನ ಕಿಂವಾ ಮರಣೇನ ಕಿಂವಾ ॥
ಕಾರ್ಯೇನ ಕಿಂವಾ ವಚನೇನ ಕಿಂವಾ ।
ಜ್ಞಾನೇನ ಕಿಂವಾ ನಮನೇನ ಕಿಂವಾ ॥೨೦೫॥

ಕೀರ್ತ್ಯಾಪಿ ಕಿಂವಾ ಕಲುಷೇಣ ಕಿಂವಾ ।
ದಾನೇನ ಕಿಂವಾ ದಯಯಾಪಿ ಕಿಂವಾ ॥
ಧರ್ಮೇಣ ಕಿಂವಾ ದಮಿನಾಪಿ ಕಿಂವಾ ।
ಮೌನೇನ ಕಿಂವಾ ಶಮನೇನ ಕಿಂವಾ ॥೨೦೬॥

ಸ್ವರ್ಗೇಣ ಕಿಂವಾ ಸ್ವನಿತೇನ ಕಿಂವಾ ।
ನಾರ್ಯಾಪಿ ಕಿಂವಾ ನಗರೇಣ ಕಿಂವಾ ॥
ಭೋಗೇನ ಕಿಂವಾ ಭುಜಗೇನ ಕಿಂವಾ ।
ಕರೇಣ ಕಿಂವಾ ಕರಣೇನ ಕಿಂವಾ ॥೨೦೭॥

ಹಾರೇಣ ಕಿಂವಾ ಹರಿಣಾಪಿ ಕಿಂವಾ ।
ಜಾಡ್ಯೇನ ಕಿಂವಾಪಿ ಜಡೇನ ಕಿಂವಾ ॥



ರೂಪೇಣ ಕಿಂವಾಪಿ ರುಜಾಪಿ ಕಿಂವಾ ।
ದಾನೇನ ಕಿಂವಾ ಧನಿನಾಪಿ ಕಿಂವಾ ॥೨೦೮॥

ಗಂಧೇನ ಕಿಂವಾಪಿ ಘೃತೇನ ಕಿಂವಾ ।
ಸಾರೇಣ ಕಿಂವಾ ಸ್ವಪನೇನ ಕಿಂವಾ ॥
ತ್ಯಾಗೇನ ಕಿಂವಾ ಗ್ರಹಣೇನ ಕಿಂವಾ ।
ಹರ್ಷೇಣ ಕಿಂವಾ ರುದನೇನ ಕಿಂವಾ ॥೨೦೯॥

ಉಚ್ಚೇನ ಕಿಂ ನೀಚಜನೇನ ಕಿಂವಾ ।
ಕಾಯೇನ ಕಿಂವಾ ಕಲಶೇನ ಕಿಂವಾ ॥
ಖಲೇನ ಕಿಂವಾ ಕಪಟೇನ ಕಿಂವಾ ।
ಶೀತೇನ ಕಿಂವಾಪಿ ಶರೇನ ಕಿಂವಾ ॥೨೧೦॥

ದುಃಖೇನ ಕಿಂ ಧೂರ್ತ ಶತೇನ ಕಿಂವಾ ।
ಪೂಜ್ಯೇನ ಕಿಂ ಪುಣ್ಯ ಶತೇನ ಕಿಂವಾ ॥
ಮೋಹೇನ ಕಿಂವಾ ಮಣಿನಾಪಿ ಕಿಂವಾ ।
ವನೇನ ಕಿಂವಾ ವ್ಯಸನೇನ ಕಿಂವಾ ॥೨೧೧॥

ವಾಸೇನ ಕಿಂವಾ ವಸನೇನ ಕಿಂವಾ ।
ಕಾರ್ಯೇಣ ಕಿಂವಾ ಕರಣೇನ ಕಿಂವಾ ॥
ರಾಜ್ಞಾಪಿ ಕಿಂವಾ ಸುರಸೇನ ಕಿಂವಾ ।
ಹ್ಯಲಂಚ ಕಿಂವಾ ಬಹುಭಾಷಣೇನ ॥೨೧೨॥

ಸ್ವಶುದ್ಧ ಚಿದ್ರೂಪಪದಂ ನ ಲಬ್ಧಂ ।
ಲಬ್ಧ್ವಾಪಿ ತಸ್ಮಿನ್ನ ಕೃತಾ ಸ್ಥಿತಿಶ್ಚೇತ್ ॥
ಪೂರ್ವೋಕ್ತಕೃತ್ಯೇನ ನಿರರ್ಥಕೇನ ।
ಲಾಭಸ್ತವಾತ್ಮನ್ ಭುವಿಕೋಪಿನಸ್ಯಾತ್ ॥೨೧೩॥

ಜ್ಞಾತ್ವೇತಿ ನಿತ್ಯಂ ಸ್ವರಸಂ ಪಿಬನ್ಹಿ ।
ಸ್ವಶುದ್ಧಚಿದ್ರೂಪ ಪದೇಪ್ರತಿಷ್ಠ ॥

ಕಸ್ಯಾಪಿ ಕಾರ್ಯಸ್ಯ ಯತೋವಶಕ್ತಾ ।
ಹ್ಯನಂತಕಾಲೇಽಪಿ ಗತೇನತೇಸ್ಯಾತ್ ॥೨೧೪॥

ಅರ್ಥ :- ಎಲೈ ಆತ್ಮನೆ! ಶುದ್ಧ ಚೈತನ್ಯಸ್ವರೂಪ ಪರಮಪದವಿಯ ಪ್ರಾಪ್ತಿಯು ಮತ್ತು ಅದರಲ್ಲಿ ಸ್ಥಿರತೆ, ನಿಶ್ಚಲತೆಗಳು ಪ್ರಾಪ್ತವಾಗುವವರೆಗೆ ವ್ರತ, ಅಭಿಮಾನ, ಸದ್‌ಹೃದಯ, ಧ್ಯಾನ, ಧೈರ್ಯ, ಸಂತಾಪ, ತಪಾಚರಣೆ ಯೋಗಧಾರಣೆ, ಮನನಚಿಂತನೆ, ಬಲಸಾಮರ್ಥ್ಯ, ಯಜ್ಞಪೂಜಾ ಪ್ರತಿಷ್ಠೆಗಳು ಕ್ರೋಧವು, ಪುಣ್ಯಶಾಲಿ, ಶಾಸ್ತ್ರಜ್ಞ, ಯಂತ್ರ ಮಂತ್ರತಜ್ಞತ್ವ, ಕಲಹ, ರತ್ನಗಳು, ಭೂಮಿ, ಮಾನವವರ್ಗ, ಮರಣ, ಶರೀರ, ವಚನ, ಜ್ಞಾನ, ವಿನಯ ಗುಣ, ಕೀರ್ತಿ, ಕಲ್ಮಷ ಭಾವನೆ, ದಾನ, ದಯೆ, ಧರ್ಮ, ಇಂದ್ರಿಯ ದಮನ, ಮೌನ ಧಾರಣೆ, ಶಾಂತಸ್ವಭಾವ, ಸ್ವರ್ಗಪ್ರಾಪ್ತಿ, ಸ್ತ್ರೀ, ನಗರ ನಿವಾಸ, ಭೋಗ ವಿಲಾಸ, ದರ್ಪ, ಹಸ್ತಪಾದಾದಿ ಅನ್ಯ ಸೌಕರ್ಯ, ಮೂರ್ಖರಸಂಗ, ಮೂಢತ್ವ, ಸುಂದರ ರೂಪಧಾರಣೆ, ರೋಗಿಯಾಗುವುದು, ಧನ, ಧನಸಂಪನ್ನತ್ವ, ಸುಗಂಧ ವಸ್ತುಗಳು, ತ್ಯಾಗ, ಸಂತೋಷ, ರೋದನ, ವೃದ್ಧಿ, ದರಿದ್ರ, ರತ್ನ, ಗಾಜುಗಳ ಸಂಗ್ರಹ, ಕಲಶವಿಡುವುದು, ದುರ್ಜನರ ಸಂಗ, ಛಲಕಪಟತೆ, ಶೀತಲ ವಸ್ತು ಮೋಹ, ದುಃಖ, ಸಹಸ್ರಾರು ಪುಂಡರ ಸಹಾಯ, ಪೂಜ್ಯರ ಸಹವಾಸ, ವನವಾಸ, ವ್ಯಸನ ಸೇವನೆ, ಸುಂದರ ವಸ್ತ್ರ ಧಾರಣೆ, ಇಂದ್ರಿಯಗಳು ರಾಜವಶ್ಯ, ಮಧುರ ರಸ ಸೇವನೆ, ಮುಂತಾದವುಗಳನ್ನು ಎಷ್ಟು ವಿವರಿಸಿದರೂ ಇದ್ದರೂ ಶುದ್ಧ ಚೈತನ್ಯ ಸ್ವರೂಪನಾದ ಆತ್ಮ ಪ್ರಾಪ್ತಿಯು ಮತ್ತು ಸ್ಥಿರತೆಯು ಇಲ್ಲವೊ ಅಷ್ಟರವರೆವಿಗೂ, ನಿಃಷ್ಪ್ರಯೋಜನವೆಂದೇ ತಿಳಿಯಬೇಕು. ಇದೆಲ್ಲ ವನ್ನು ತಿಳಿದು ತನ್ನ ಆತ್ಮಜನ್ಯ ಆನಂದರಸವನ್ನು ಆಸ್ವಾದಿಸುತ್ತ ಆತ್ಮ ಸ್ವರೂಪದಲ್ಲಿ ತನ್ಮಯನಾಗಬೇಕು. ಪರವಸ್ತುಗಳನ್ನು ಕೂಡಾ ತ್ಯಜಿಸಬೇಕು ಸಂಸಾರ ಸಂಬಂಧ ಯಾವ ಕಾರ್ಯದಲ್ಲಿ ಮುಳುಗಿದರೆ ಅನಂತಕಾಲವು ಗತಿಸಿದರೂ ಕೂಡಾ ಶುದ್ಧ ಆತ್ಮ ಪ್ರಾಪ್ತಿಯಾಗಲಾರದು.

ಭಾವಾರ್ಥ :- ಆತ್ಮ ಶುದ್ಧ ಸ್ವರೂಪ ಪ್ರಾಪ್ತಿಯೆ ಶುದ್ಧೋಪಯೋಗವು. ಇದು ಮೋಕ್ಷಕ್ಕೆ ಕಾರಣವಾಗಿದೆ. ಎಷ್ಟರವರೆಗೆ ಶುದ್ಧೋಪಯೋಗವು ಆತ್ಮ ಕಲ್ಯಾಣ ನಿಜಮಾರ್ಗದಲ್ಲಿ ನಡೆಸಲು ಸಾಧ್ಯವಾಗುವುದು. ಯದ್ಯಪಿ ವ್ರತ,



ಉಪವಾಸ, ತಪಶ್ಚರಣ, ಧ್ಯಾನ, ಸಮಿತಿ, ಗುಪ್ತಿ, ಪರೀಷಹ ಸಹನ, ಚಾರಿತ್ರ ಮುಂತಾದ ವ್ಯವಹಾರ ಸಾಧನಗಳು ಶುದ್ಧೋಪಯೋಗದ ಸಾಧನಗಳಾಗಿವೆ. ತಥಾಪಿ ಇವೆಲ್ಲವು ಭವ್ಯ ಜೀವಿಗಳಿಗೆ ಮೋಕ್ಷ ಹೇತುಗಳಾಗಿವೆ. ಅಭವ್ಯರಿಗೆ ಇವೆಲ್ಲವು ಮಿಥ್ಯಾರೂಪವಾಗಿಯೇ ಪರಿಣಮಿಸುವವು. ಇವು ಅರ್ಥಾತ್ ಮಿಥ್ಯಾವ್ರತ, ಉಪವಾಸ, ಮೊದಲಾದವು ಸಂಸಾರ ಪರಿಭ್ರಮಣೆಗೆ ಕಾರಣ ವಾಗುವುವೆಂದು ತಿಳಿದು ವಿಚಾರಿಸಿ, ಭವ್ಯಜೀವಗಳು ಮೊತ್ತಮೊದಲು ಮೋಹ ನೀಯ ಕರ್ಮವನ್ನು ನಾಶಮಾಡಿ ಸಮ್ಯಗ್ದರ್ಶನವನ್ನು ಧರಿಸಬೇಕು. ಇದರ ಸಂಗದಿಂದ ಜ್ಞಾನವು ಸಮ್ಯಗ್‌ಜ್ಞಾನವಾಗುವುದು. ಅನಂತರ ಸಮ್ಯಕ್ಚಾರಿತ್ರ ವನ್ನು ಧರಿಸಿ ಪಾಪ ಕರ್ಮಗಳನ್ನು ಹೊಡೆದೋಡಿಸಬೇಕು. ಹಾಗೆ ಶುದ್ಧೋಪ ಯೋಗವನ್ನು ಧಾರಣೆಮಾಡಿ ಶುದ್ಧ ಆತ್ಮದಲ್ಲಿ ಸ್ಥಿರನಾಗಿ ಸಕಲ ಕರ್ಮಗಳನ್ನು ನಾಶಗೊಳಿಸಬೇಕು. ಸಕಲ ಕರ್ಮಗಳಿಂದ ಬಿಡುಗಡೆಯೆ ಮೋಕ್ಷವು. ಈ ಮೋಕ್ಷದಲ್ಲಿ ಅನಂತಾನಂತ ಕಲ್ಪಕಾಲಗಳು ಗತಿಸಿದರು ಕೂಡಾ ಅದರಲ್ಲಿ ಯಾವ ಪರಿವರ್ತನೆಯಾಗುವುದಿಲ್ಲವು.

ಮುಂದಕ್ಕೆ ಶುದ್ಧೋಪಯೋಗದ ವಿಶೇಷತೆ.

ಪ್ರಶ್ನೆ :- ಶುದ್ಧೋಪಯೋಗ ಸ್ಯಾರಂಭಃ ।
ಕಸ್ಮಿನ್ ಸ್ಥಾನೇಚ ಲೀನತಾ ॥

ಅರ್ಥ :- ಹೇ ಭಗವಾನ್ ! ಶುದ್ಧೋಪಯೋಗವು ಎಲ್ಲಿಂದ ಪ್ರಾರಂಭ ವಾಗುವುದು ಮತ್ತು ಅದರ ಸ್ಥಿರತೆ, ತನ್ಮಯತೆ, ಯಾವ ಗುಣಸ್ಥಾನದಿಂದಾಗುವು ದೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಸ್ಥಾನಾಚ್ಚತುರ್ಥಾತ್ಖಲು ಶಾಂತಿರೂಪ ।
ಶುದ್ಧೋಪಯೋಗಸ್ಯ ಶಿವಪ್ರದಸ್ಯ ॥
ಪ್ರಾರಂಭ ಏವಾತ್ಮರತಸ್ಯ ನೃಣಾಂ ।
ಸ್ಯಾಚ್ಛುದ್ಧ ಚಿದ್ರೂಪಪದೇಽನುರಾಗಃ ॥೨೧೫॥

ತತಃ ಕಿಲೋರ್ಧ್ವಂ ಸ್ಥಿರತಾಂ ಸ್ವಧರ್ಮೇ ।
ಪ್ರತೀಪ್ರತೇಸ್ವಾತ್ಮರಸೇಽತಿಮಿಷ್ಟೇ ॥

ಪ್ರಾಪ್ನೋತಿ ಯೋಗ್ಯೇವರಚಿಂ ವಿಶೇಷಾಂ ।
ಪ್ರಮಾದ ನಾಶಾದ್ಧಿ ಸುಖಂ ಸ್ವಭಾವಾತ್ ॥೨೧೬॥

ಅರ್ಥ :- ಈ ಶುದ್ಧೋಪಯೋಗವು ಮಹಾ ಶಾಂತಿ ಸ್ವರೂಪವೂ, ಮೋಕ್ಷದಾಯಕವೂ ಆಗಿರುತ್ತದೆ. ಇದರ ಪ್ರಾರಂಭವು ಸ್ವಾತ್ಮಾನುಭೂತಿಯ ಅಪೇಕ್ಷೆಗಿಂತ ನಾಲ್ಕನೇಯ ಗುಣಸ್ಥಾನದಲ್ಲೇ ಆಗುತ್ತದೆ. ಹಾಗೆಯೆ ನಾಲ್ಕನೇಯ ಗುಣಸ್ಥಾನದಿಂದ ಶುದ್ಧ ಚಿದಾನಂದ ಸ್ವರೂಪದ ಅನುರಾಗವು, ಅನಂತರ ಮೇಲಮೇಲಿನ ಗುಣಸ್ಥಾನಗಳಲ್ಲಿ ವ್ರತೀಪುರುಷರಲ್ಲಿ ಸ್ಥಿರತೆಯು ಅಭಿರುಚಿಯುಂಟಾಗಿ ಪ್ರಮಾದಗಳು ದೂರಾದನಂತರ ಸ್ವಾಭಾವಿಕ ಆತ್ಮಸುಖ ಪ್ರಾಪ್ತಿಯಾಗುವುದು.

ಭಾವಾರ್ಥ :- ಈ ಸಂಸಾರದಲ್ಲಿ ಪ್ರಾಣಿಗಳು ಮೋಹನೀಯ ಕರ್ಮದ ಉದಯದಿಂದ ಆತ್ಮಸ್ವರೂಪವನ್ನು ಮರೆತು ಬಿಟ್ಟು ಪರಪದಾರ್ಥಗಳಲ್ಲಿ ಮೋಹಿಗಳಾಗಿ, ರಾಗದ್ವೇಷವನ್ನಿಟ್ಟುಕೊಂಡು, ಅಶುಭೋಪಯೋಗಿಗಳಾಗಿವೆ. ಪರಂತು ಆ ಮೋಹನೀಯ ಕರ್ಮದ ಉಪಶಮ, ಅಥವಾ ಕ್ಷಯ ಅಥವಾ ಕ್ಷಯೋಪಶಮವಾಗುವಾಗ ಆ ಜೀವನಿಗೆ ಒಂದು ವಿಧವಾದ ಆತ್ಮಜನ್ಯ ಅಮೂರ್ತ ಪ್ರಭೆಯು ಉದ್ಭವಿಸುವುದು. ಆಗ ಆತ್ಮನ ನಿಜ ಸ್ವರೂಪವನ್ನು ಕಂಡುಹಿಡಿಯಲು (ತೊಡಗು) ಪ್ರಯತ್ನಿಸುವನು ಈ ಪ್ರಭೆಗೇನೆ ಸಮ್ಯಗ್ದರ್ಶನವೆಂದು ಹೇಳುತ್ತಾರೆ. ಇದರ ಪ್ರಭಾವದಿಂದ ಜೀವನು ಪರ ಪದಾರ್ಥಗಳು ಹೇಯವೆಂದು, ಆತ್ಮ ಸ್ವರೂಪವು ಉಪಾದೇಯವೆಂದು ತಿಳಿಯುವನು. ಈ ಪ್ರಕಾರ ಹೇಯೋಪಾದೇಯ ಬುದ್ಧಿಯು ಉಂಟಾಗಿ ಕ್ರಮವಾಗಿ ಆತನ ರಾಗದ್ವೇಷಗಳು ಬಿಟ್ಟು ಹೋಗುತ್ತವೆ. ಅದರಿಂದ ಅಶುಭೋಪಯೋಗವು ಮಾಯವಾಗುತ್ತದೆ. ಶುದ್ಧೋಪಯೋಗದ ಪ್ರವೃತ್ತಿಯ ಪ್ರಾರಂಭವಾಗುತ್ತದೆ ಮತ್ತೆ ಎಷ್ಟು ಅಂಶ (ಭಾಗ) ಮೋಹನೀಯ ಕರ್ಮ ನಾಶವಾಗುವುದೋ ಅಷ್ಟು ಭಾಗ ಆತ್ಮನ ಶುದ್ಧ ಅವಸ್ಥೆಯು ಪ್ರಕಟವಾಗುವುದು. ಇದಕ್ಕೆ ಉಪಚಾರದಿಂದ ಶುದ್ಧೋಪಯೋಗವೆಂದು ಹೇಳುವುದು. ತದನಂತರ ಅಪ್ರತ್ಯಾಖ್ಯಾನಾವರಣ ಕರ್ಮವು ನಷ್ಟವಾಗುವಾಗ ಈ ಜೀವನು ವ್ರತಧಾರಣೆಮಾಡುತ್ತಾನೆ. ಆಮೇಲೆ ಪ್ರತ್ಯಾಖ್ಯಾನಾವರಣವು



ಮಾಯವಾಗುವಾಗ ಮಹಾವ್ರತವನ್ನು ಧಾರಣೆ ಮಾಡುತ್ತಾನೆ. ಅದರಿಂದ ಕರ್ಮಗಳು ಅಧಿಕ ಸಂಖ್ಯೆಯಲ್ಲಿ ನಿರ್ಜರೆಯಾಗುತ್ತಿರುತ್ತವೆ. ಮತ್ತೆ ಆ ಯೋಗಿಗೆ ತನ್ನ ಆತ್ಮನ ಶುದ್ಧಸ್ವರೂಪದಲ್ಲಿ ಅಧಿಕ ಅಭಿರುಚಿಯುಂಟಾಗುತ್ತದೆ. ಪ್ರಮಾದಗಳು ದೂರವಾಗುವಾಗ ಆತ್ಮನು ಶುದ್ಧೋಪಯೋಗ ಸಾಮೀಪ್ಯಕ್ಕೆ ತಲುಪುವನು. ಅದರ ಉತ್ಪತ್ತಿಯಾಗುವಾಗ ಮುಂದು ಮುಂದಕ್ಕೆ ಇರುವ ಗುಣ ಸ್ಥಾನಗಳಲ್ಲಿ ಏರುವಾಗ ಆತ್ಮನು ಶುದ್ಧತೆಯು ಬೆಳೆಯುತ್ತ ಹೋಗುತ್ತದೆ. ಆ ಮೇಲೆ ಘಾತಿಕರ್ಮಗಳು ನಾಶವಾಗಿ ಹದಿಮೂರನೆಯ ಗುಣ ಸ್ಥಾನದಲ್ಲಿ ಅತಿ ಶುದ್ಧತೆಯು ಅಥವಾ ಶುದ್ಧೋಪಯೋಗದ ಪೂರ್ಣತೆಯು ಆಗುವುದು. ಅನಂತ ಜ್ಞಾನ, ಅನಂತದರ್ಶನ, ಅನಂತ ವೀರ್ಯ, ಅನಂತ ಸುಖ ಅನಂತ ಚತುಷ್ಟಯಗಳ ಪ್ರಾದುರ್ಭಾವವಾಗುವುದು. ಇವು ಅನಂತ ಕಾಲದವರೆಗೆ ಸ್ಥಿರತೆಯು, ನಿರ್ವಿಕಾರತ್ವವು ನೆಲೆನಿಲ್ಲುವುವು.

ಮುಂದಕ್ಕೆ ಶುದ್ಧೋಪಯೋಗದ ಸಿದ್ಧಿಗಾಗಿ ಆರು ದ್ರವ್ಯಗಳ ನಿರೂಪಣೆ.

ತ್ಯಜೇನ್ನ ಧರ್ಮೋಗಮನೋಪಕಾರಂ ।
ಸ್ಥಿತೌ ಸಹಾಯ್ಯಂ ನ ಕದಾಪ್ಯಧರ್ಮಃ ।
ನಭೋಽಪಿ ನಿತ್ಯಂ ಹ್ಯವಕಾಶ ದಾನಂ ।
ತ್ಯಜೇನ್ನ ಕಾಲಃ ಪರಿವರ್ತನತ್ವಮ್ ॥೨೧೭॥

ಸ್ಪರ್ಶಾದಿಧರ್ಮಂ ನ ಚ ಪುದ್ಗಲೋಽಪಿ ।
ಸಂಸಾರಿ ಜೀವಶ್ಚ ವಿಭಾವ ಭಾವಮ್ ।
ಲಬ್ಧ್ವೋಪದೇಶಂ ಸುಗುರೋರ್ನಿಜಾತ್ಮ ।
ಸುಶುದ್ಧ ಚಿದ್ರೂಪಪದಂ ಲಭೇದ್ಧಿ ॥೨೧೮॥

ಪೂರ್ವೋಕ್ತ ಷಡ್‌ದ್ರವ್ಯಚಯಸ್ಯ ಲಕ್ಷ್ಮ ।
ಜ್ಞಾತ್ವಾಫಲಂ ಸ್ವಾತ್ಮತರೋಃ ಸುಮಿಷ್ಟಂ ॥
ಸ್ವಾತ್ಮಾತ್ಮನಾ ವಾತ್ಮನಿ ವಾತ್ಮನೇವಾ -।
ತ್ಮಾನಃ ಕಿಲಾತ್ಮಾನಮಪಿ ಪ್ರಯತ್ನಾತ್ ॥೨೧೯॥

ಜಾನಾತಿ ಯಃ ಪಶ್ಯತಿ ತಿಷ್ಠತೀತಿ ।
ಶುದ್ಧೋಪಯೋಗೀ ಸ ಮುನಿಃ ಪ್ರಪೂಜ್ಯಃ ॥
ನಿಜಾತ್ಮತೃಪ್ತೇನ ದಿಗಂಬರೇಣ ।
ಶ್ರೀ ಕುಂಥುನಾಮ್ನಾವರಸೂರಿಣೋಕ್ತಂ ॥೨೨೦॥

ಅರ್ಥ :- ಧರ್ಮದ್ರವ್ಯವು ಜೀವ, ಪುದ್ಗಲಗಳ ಗಮನಕ್ಕೂ, ಅಧರ್ಮದ್ರವ್ಯವು ನಿಲ್ಲುವುದಕ್ಕೂ, ಆಕಾಶದ್ರವ್ಯವು ಸಕಲಪದಾರ್ಥಗಳಿಗೆ ಸ್ಥಾನವನ್ನೀಯುವುದಕ್ಕೂ, ಕಾಲದ್ರವ್ಯವು ಎಲ್ಲ ಪದಾರ್ಥಗಳ ಪರಿವರ್ತನೆಗೂ ಸಹಾಯಕಗಳಾಗಿವೆ. ಪುದ್ಗಲ ದ್ರವ್ಯವು ಸ್ಪರ್ಶ, ರಸ, ಗಂಧವರ್ಣರೂಪ ತನ್ನ ಸ್ವಭಾವವನ್ನು ಬಿಡದಿರುವಂತೆ ಸಂಸಾರೀ ಜೀವಗಳು ತಮ್ಮ ವಿಭಾವಪರಿಣಾಮಗಳನ್ನು ಬಿಡುವುದಿಲ್ಲವು. ಆದರೆ ಆ ಸಂಸಾರೀ ಜೀವಗಳು ತಮ್ಮ ವೀತರಾಗ ನಿರ್ಗ್ರಂಥ ಗುರುಗಳ ಮುಖದಿಂದ ಧರ್ಮೋಪದೇಶವನ್ನು ಕೇಳಿ ತಮ್ಮ ವಿಭಾವ ಪರಿಣಾಮಗಳನ್ನು ತ್ಯಜಿಸುತ್ತವೆ. ತಮ್ಮ ಆತ್ಮನ ಚಿದಾನಂದಸ್ವರೂಪವನ್ನು, ಪರಮ ಶುದ್ಧಭಾವವನ್ನು ಪಡೆಯುವವು. ಈ ಪ್ರಕಾರ ಯಾವ ಜೀವಗಳು ಆರು ದ್ರವ್ಯಗಳನ್ನು ತಿಳಿದುಕೊಳ್ಳುತ್ತವೆಯೋ ಹಾಗೆ ಆತ್ಮಶುದ್ಧಿರೂಪವೃಕ್ಷದ ಫಲವೆಂದು ತಿಳಿದುಕೊಂಡು ಚಿದಾನಂದಸ್ವರೂಪತ್ವವು ತನ್ನಿಂದಲೇ ಸಾಧ್ಯವೆಂದು ತಿಳಿಯುತ್ತಾನೆಯೋ, ನೋಡುತ್ತಾನೆಯೋ, ಅಂತಹ ಶುದ್ಧೋಪಯೋಗೀ ಮುನಿಯು ಸದಾಕಾಲವು ಪೂಜ್ಯನಾಗುತ್ತಾನೆ. ಹೀಗೆ ತನ್ನಾತ್ಮನಲ್ಲಿ ತೃಪ್ತನಾಗುವ ದಿಂಗಂಬರ ಮುದ್ರೆಯನ್ನು ಧರಿಸಿರುವ ಆಚಾರ್ಯವರ್ಯ ಶ್ರೀ ಕುಂಥುಸಾಗರ ಮಹಾರಾಜರು ವಿವರ್ಣಿಸಿರುತ್ತಾರೆ.

ಭಾವಾರ್ಥ :- ಈ ಪ್ರಪಂಚವು ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲಗಳೆಂಬ ಆರು ದ್ರವ್ಯಗಳಿಂದ ಭರಿತವಾಗಿದೆ. ಇವುಗಳಲ್ಲಿ ಪುದ್ಗಲ ದ್ರವ್ಯವು ಮಾತ್ರ ಸ್ಪರ್ಶ, ರಸ, ಗಂಧ, ವರ್ಣಗಳಿಂದ ಕೂಡಿರುವುದರಿಂದ ರೂಪೀದ್ರವ್ಯವೆಂದು ಹೇಳಿಸಿಕೊಳ್ಳುವುದು. ಇವು ಏಕತ್ರಿತವಾಗಿಯೇ ಇವೆ. ಕೆಲವು ವಸ್ತುಗಳಲ್ಲಿ ಒಂದೇ ಗುಣವಿರುವುದೆಂದು ತೋರುತ್ತಿದ್ದರು ಅದರಲ್ಲಿ ಸೂಕ್ಷ್ಮರೂಪವಾಗಿಯಾಗಲಿ ಅಥವಾ ಸ್ಥೂಲರೂಪವಾಗಲಿ ನಾಲ್ಕು ಗುಣ



ಗಳಿರುತ್ತವೆ. ಉದಾ :- ವಾಯುವಿನಲ್ಲಿ ಕೇವಲ ಸ್ಪರ್ಶಗುಣವಿರುವುದೆಂದು ಕಂಡು ಬರುತ್ತಿದ್ದರು ಆದರಲ್ಲಿ ನಾಲ್ಕುಗುಣಗಳಿರುತ್ತವೆ. ಸೈನ್ಸ್ ಪ್ರಕಾರ ನೀರು ಎರಡು ವಿಧ ವಾಯುಗಳ ಪರಿಣತಿಯಿಂದಾಗುವ ನೀರಿನಲ್ಲಿರುವ ರೂಪವನ್ನು ಸೂಕ್ಷ್ಮ ರೀತಿಯಾಗಿ ವಾಯುವಿನಲ್ಲಿ ಪರಿಣತವಾಗುವುದು. ಅನಂತರ ಯದಿ ಆ ಎರಡು ವಿಧ ವಾಯುವು ನೀರಿನರೂಪವಾಗಿ ಪರಿಣಮಿಸುವಾಗ ಅದು ಸೂಕ್ಷ್ಮ ಸ್ಥೂಲರೂಪವಾಗಿ ಪ್ರಕಟವಾಗುತ್ತದೆ. ಅತಃ ವಾಯುವಿನಲ್ಲಿ ರೂಪವಿರುವುದೆಂದು ಸಿದ್ಧವಾಗುತ್ತದೆ. ಒಂದುವೇಳೆ ವಾಯುವಿನಲ್ಲಿ ರೂಪವಿಲ್ಲದಿರುತ್ತಿದ್ದರೆ ಅದರಿಂದ ಉಂಟಾಗುವ ನೀರಿನಲ್ಲಿಯೂ ರೂಪವು ಎಲ್ಲಿಂದ ಉಂಟಾಗಬೇಕು ? ಆದರೆ ವಾಯುವಿನಿಂದುಂಟಾಗುವ ನೀರಿನಲ್ಲಿ ರೂಪವು ಕಂಡುಬರುವಾಗ ವಾಯುವಿನಲ್ಲಿಯೂ ಕೂಡಾ ರೂಪವಿರುವುದೆಂದು ಅವಶ್ಯವಾಗಿ ಒಪ್ಪಬೇಕು. ಹಾಗೆಯೇ ಎಲ್ಲೆಲ್ಲಿ ರೂಪವಿರುವುದೋ ಅಲ್ಲಲ್ಲಿ ರಸ ಮತ್ತು ಗಂಧಗಳು ನಿಶ್ಚಯವಾಗಿ ಇದ್ದೇ ಇರಬೇಕು. ಉದಾ :- ಮಾವಿನಹಣ್ಣಿನಲ್ಲಿ ರೂಪವಿರುವುದರಿಂದ ಸ್ಪರ್ಶ, ರಸ, ಗಂಧಗಳೂ ಕೂಡಾ ಇರಲೇಬೇಕು. ಹೀಗೆ ವಾಯುವಿನಲ್ಲಿ ನಾಲ್ಕು ಗುಣಗಳಿರುತ್ತವೆಂದು ತಿಳಿಯಬೇಕು. ಇದೇ ಪ್ರಕಾರವಾಗಿ ಪೃಥ್ವಿ, ಜಲ, ಅಗ್ನಿ ಇವುಗಳು ಕೂಡಾ ಪುದ್ಗಲಗಳಾಗಿವೆ. ಶಬ್ದವೂ ಪುದ್ಗಲವೇ, ಅದು ಕಿವಿಯಿಂದ ಕೇಳಲ್ಪಡುತ್ತದೆ. ಅದರಿಂದ ಅದರಲ್ಲಿ ಸ್ಪರ್ಶಗುಣವಿರುವುದು ಸರ್ವಸಮ್ಮತವೇ. ಉದಾ :- ದೊಡ್ಡದೊಡ್ಡ ಫಿರಂಗಿ, ಬಾಂಬುಗಳ ಸ್ಫೋಟನೆಯಿಂದ ದೊಡ್ಡದೊಡ್ಡ ಕಟ್ಟಡಗಳು ಕಂಪಿಸುತ್ತವೆ, ಬಿದ್ದುಹೋಗುತ್ತವೆ. ಮಾತ್ರವಲ್ಲ ; ಸ್ತ್ರೀಯರ ಗರ್ಭಪಾತವೂ ಆಗುವುದುಂಟು. ಇದರಿಂದ ಶಬ್ದದಲ್ಲಿ ಸ್ಪರ್ಶಗುಣಗಳಿವೆ ಎಂದು ಸಿದ್ಧವಾಗುತ್ತದೆ. ಎಲ್ಲಿ ಸ್ಪರ್ಶಗುಣವಿರುವುದೋ ಅಲ್ಲಿ ರೂಪವೂ ಕೂಡಾ ಇರುತ್ತದೆ. ಹೀಗೆ ಶಬ್ದದಲ್ಲಿ ಸ್ಪರ್ಶಗುಣವು ಪ್ರತ್ಯಕ್ಷಪ್ರಕಟವಾಗಿದೆ. ರೂಪ, ರಸ, ಗಂಧಗಳು ಸೂಕ್ಷ್ಮರೂಪವಾಗಿ ಅಡಗಿಕೊಂಡಿರುತ್ತವೆ. ಇದು ತನ್ನ ಗುಣವನ್ನು ಬಿಟ್ಟಿರಲಾರದು. ಇಷ್ಟು ಮಾತ್ರವಲ್ಲ ; ಪುದ್ಗಲದಲ್ಲಿ ಗಮನಮಾಡುವ ಕ್ರಿಯಾಶಕ್ತಿಯು ಕೂಡಾ ಇರುವುದು. ವಾಯುವಿನ ಸಹಾಯವಿಲ್ಲದಿದ್ದರೂ ಚಲಿಸುವುದು. ಇದರಂತೆ ಬೇರೆ ಪದಾರ್ಥಗಳು ಲಘುವಾಗಿರುವುದರಿಂದ ಚಲಿಸುವುವು. ಇದೇ ರೀತಿಯಾಗಿ ಜೀವದ್ರವ್ಯದಲ್ಲಿ ಚಲನಶಕ್ತಿಯೂ ಇದೆ. ಜೀವ ಮತ್ತು ಪುದ್ಗಲಗಳಲ್ಲಿ

ಚಲನಶಕ್ತಿಯು ಇದ್ದರೂ ಚಲನೆಗೆ ಧರ್ಮದ್ರವ್ಯದ ಸಹಾಯವು ಬೇಕು. ಯಾವ ಪ್ರಕಾರವಾಗಿ ಮೀನುಗಳಲ್ಲಿ ಚಲನಮಾಡುವ ಶಕ್ತಿಯಿದ್ದರೂ ಅವುಗಳ ಸಂಚಾರಕ್ಕೆ ನೀರು ಸಹಾಯಕವಾಗಿರುತ್ತದೆ. ಒಂದುವೇಳೆ ನೀರು ಇಲ್ಲದಿದ್ದರೆ ಮೀನುಗಳು ಸಂಚರಿಸದಿರುವಂತೆ, ಧರ್ಮದ್ರವ್ಯವಿಲ್ಲದಿದ್ದರೆ ಜೀವ-ಪುದ್ಗಲಗಳ ಗಮನವು ಕೂಡಾ ಸಾಧ್ಯವಿಲ್ಲವು. ಆದ್ದರಿಂದ ಧರ್ಮದ್ರವ್ಯದ ಅಸ್ತಿತ್ವವು ಸಿದ್ಧವಾಗುತ್ತದೆ. ಇದರಂತೆ ಜೀವ-ಪುದ್ಗಲಗಳ ನಿಲ್ಲುವಿಕೆಗೆ, ಮಾರ್ಗಸ್ಥರ ನಿಲುವಿಗೆ ಮರದ ನೆರಳು ಸಹಾಯಕವಾಗಿರುವಂತೆ ಅಧರ್ಮದ್ರವ್ಯವು ಇದೆಂದು ಸಿದ್ಧವಾಗುತ್ತದೆ. ಇವೆರಡು ವ್ಯಾಪಕವಾಗಿ ಸಮಸ್ತ ಲೋಕಾಕಾಶದಲ್ಲಿ ತುಂಬಿಹೋಗಿರುತ್ತವೆ. ಆಕಾಶದ್ರವ್ಯವು ಸಕಲವಸ್ತುಗಳಿಗೂ ಸ್ಥಾನವನ್ನೀಡುವುದು ಮತ್ತೆ ಕಾಲ ದ್ರವ್ಯವು ದ್ರವ್ಯಗಳ ಪರಿವರ್ತನೆ(ಬದಲಾವಣೆ)ಗೆ ಕಾರಣೀಭೂತವಾಗಿರುತ್ತದೆ. ಕಾಲದ ಪ್ರತಿಯೊಂದು ಸಮಯ ಪ್ರತಿಯೊಂದು ಪದಾರ್ಥಗಳ ಪರಿವರ್ತನೆಯು ಆಗುತ್ತಿರುತ್ತದೆ. ಹೀಗೆ ಪರಿವರ್ತನೆಯಾಗುತ್ತ ನೂತನ ಪದಾರ್ಥಗಳು ಕಾಲಾಂತರದಲ್ಲಿ ಜೀರ್ಣಾವಸ್ಥೆಗೆ ಬರುತ್ತವೆ. ಆದ್ದರಿಂದ ಕಾಲದ್ರವ್ಯದ ಅಸ್ತಿತ್ವವು ಸಿದ್ಧವಾಗುತ್ತದೆ. ಜೀವವು ಚೈತನ್ಯಸ್ವರೂಪವಾಗಿರುವುದೆಂದು ಮೊದಲೇ ವಿವರ್ಣಿಸಲ್ಪಟ್ಟಿರುವುದು. ಆ ಜೀವಗಳಲ್ಲಿ ಸಂಸಾರಿಜೀವ, ಮುಕ್ತ ಜೀವಗಳೆಂಬ ಭೇದಗಳಿವೆ. ಸಂಸಾರೀ ಜೀವಗಳು ರಾಗದ್ವೇಷರೂಪ ವಿಭಾವ ಪರಿಣಾಮಿಗಳಾಗಿರುತ್ತವೆ. ಈ ವಿಭಾವ ಪರಿಣಾಮದಿಂದಲೇ ನರಕಾದಿ ನಾಲ್ಕು ಗತಿಗಳಲ್ಲಿ ಭ್ರಮಿಸಿಕೊಂಡಿರುತ್ತವೆ. ಹೀಗೆ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಇವಾರುದ್ರವ್ಯಗಳ ವಿಚಾರವನ್ನು ಗುರುಮುಖೇನ ತಿಳಿದು ವಿಭಾವಪರಿಣಾಮಗಳಿಂದ ಬಿಡುಗಡೆಯಾಗಿ ಶುದ್ಧಾತ್ಮನ ಪರಿಶುದ್ಧ ಸ್ವರೂಪವನ್ನು ಗ್ರಹಿಸುವಾಗಲೇ ಆರು ದ್ರವ್ಯಗಳನ್ನು ತಿಳಿದು ತ್ಯಜಿಸುವನು. ಹಾಗೆ ತನ್ನ ಆತ್ಮಕಲ್ಯಾಣಕ್ಕಾಗಿ ಆತ್ಮನ ಶುದ್ಧಸ್ವರೂಪವನ್ನು ಪ್ರಕಟಿಸಿಕೊಳ್ಳುತ್ತಾನೆ. ಈ ಶುದ್ಧಾತ್ಮನಲ್ಲಿ ಸ್ಥಿರನಾಗುವುದೇ ಶುದ್ಧೋಪಯೋಗವು. ಇದು ಸಮಸ್ತ ಕರ್ಮಗಳನ್ನು ನಾಶಗೊಳಿಸುವುದಕ್ಕೂ, ಮೋಕ್ಷಲಕ್ಷ್ಮಿಯ ಪ್ರಾಪ್ತಿಗೂ ಕಾರಣವಾಗಿರುತ್ತದೆಂದು ಆಚಾರ್ಯವರ್ಯರಾದ ಶ್ರೀ ಕುಂಥುಸಾಗರ ಮಹಾಮುನಿಗಳು ನಿರೂಪಿಸಿರುತ್ತಾರೆ. ಸಕಲ ಭವ್ಯಜೀವಗಳು ತಮ್ಮ ಆತ್ಮಕಲ್ಯಾಣದಲ್ಲಿ ತತ್ಪರರಾಗಬೇಕೆಂಬುದೇ ಮುಖ್ಯ ಉದ್ದೇಶವಾಗಿರುತ್ತದೆ.



ಮುಂದಕ್ಕೆ ಜೀವಗಳ ಅವಗಾಹನೆಯನ್ನು ವರ್ಣಿಸುತ್ತಾರೆ.

ಪ್ರಶ್ನೆ :- ಜೀವಾನಾಮವಗಾಹಶ್ಚ ಕಿಯನ್ಮೈಸಾಂಪ್ರತಂ ವದ ।

ಅರ್ಥ :- ಹೇ ಭಗವಾನ್! ದಯವಿಟ್ಟು ಜೀವಗಳ ಅವಗಾಹವು ಎಷ್ಟೆಂಬುದನ್ನು ವಿವರಿಸಬೇಕು.

ಉತ್ತರ :- ಅವಗಾಹನೇನ ಜೀವಾಃ ಸಂತಿ ದೇಹಪ್ರಮಾಣಕಾಃ ।
ಪ್ರದೇಶಾ ಏಕಜೀವಸ್ಯ ಸಂಖ್ಯಾತೀತಾಃ ಜಗತ್ಸಮಾಃ ॥೨೨೧॥

ವೀತರಾಗ ಜಿನೇಂದ್ರಸ್ಯಾನಂತಂ ಜ್ಞಾನಂ ನಭಃ ಸಮಮ್ ।
ಜ್ಞಾನಾಪೇಕ್ಷಯಾ ವ್ಯಾಪ್ತಾಃ ಸರ್ವೇ ಜೀವಾಃ ನಭಃ ಸಮಾಃ ॥೨೨೨॥

ಯದ್ಯೇವಂ ಪ್ರಾಣಿನಾಂ ಲಕ್ಷ್ಮನಸ್ಯಾತ್ತರ್ಹಿ ನಿರಂಜನಂ ।
ಸುಖದುಃಖಾದಿಸಂಬಂಧಃ ಸರ್ವೈಃ ಸಾರ್ಧಂ ಭವೇದ್ಧ್ರುವಂ ॥

ಕಿಂತ್ವೇವಂ ದೃಶ್ಯತೇ ನಾತೋ ಗ್ರಾಹ್ಯಃ ಪೂರ್ವವಿಧಿರ್ಮುದಾ ।
ಭವ್ಯಾಮೋಹಂ ಯತಸ್ತ್ಯಕ್ತ್ವಾ ಲಭೇರನ್ಮುಕ್ತಿಕಾಮಿನೀಮ್ ॥೨೨೪॥

ಅರ್ಥ :- ಈ ಎಲ್ಲ ಜೀವಗಳು ತಮ್ಮ ತಮ್ಮ ಶರೀರಪ್ರಮಾಣ ಅವಗಾಹನೆಯ ದೃಷ್ಟಿಯು ಸಮಾನವಾಗಿರುತ್ತದೆ. ಪ್ರದೇಶಗಳ ಅಪೇಕ್ಷೆಯಿಂದ ಲೋಕಾಕಾಶ ಪ್ರದೇಶಕ್ಕೆ ಸಮಾನ ಅಸಂಖ್ಯಾತ ಪ್ರದೇಶಗಳುಳ್ಳವುಗಳಾಗಿವೆ. ವೀತರಾಗ ಸರ್ವಜ್ಞದೇವನ ಜ್ಞಾನವು ಅನಂತವಾಗಿರುತ್ತದೆ. ಅನಂತ ಆಕಾಶಕ್ಕೆ ಸಮಾನವು ಅದಕ್ಕಿಂತಲೂ ಕೂಡಾ ಅನಂತಗುಣವಿದೆ. ಆದ್ದರಿಂದ ಜ್ಞಾನಾಪೇಕ್ಷೆಯಿಂದ ಸಮಸ್ತ ಜೀವಗಳು ಆಕಾಶಸಮಾನ ಸರ್ವತ್ರ ವ್ಯಾಪ್ತವಾಗಿರುತ್ತವೆ. ಕದಾಚಿತ್ ಇಲ್ಲಿ ಯಾರಾದರು ಪ್ರಶ್ನಿಸಬಹುದು. ಒಂದುವೇಳೆ ಜ್ಞಾನಾಪೇಕ್ಷೆಯಿಂದ ಜೀವನನ್ನು ವ್ಯಾಪಕನೆಂದು ಒಪ್ಪಿಕೊಂಡರೆ ಜೀವದ ನಿರಂಜನಲಕ್ಷಣವು ಸಿದ್ಧವಾಗುವುದಿಲ್ಲವು ಕಾರಣ ಜೀವವನ್ನು ವ್ಯಾಪಕನೆಂದು 'ಒಪ್ಪಿದರೆ ಸುಖದುಃಖಗಳ ಸಂಬಂಧವು ಎಲ್ಲ ಜೀವಗಳೊಡನೆ ಆಗುವುದೆ, ಆದರೆ ಹಾಗೆ ಕಂಡು ಬರುವುದಿಲ್ಲವು. ಆದ್ದರಿಂದ ಜ್ಞಾನಾಪೇಕ್ಷೆಯಿಂದೆಂಬುದನ್ನು ಮರೆಯದಿದ್ದರೆ

ದೋಷವು ಸಂಭವಿಸಲಾರದು. ಅರ್ಥಾತ್ ಯಾವಾಗ ಈ ಜೀವನು ಅನ್ಯ ಸಕಲ ಪದಾರ್ಥಗಳನ್ನು ತ್ಯಜಿಸಿ ಕೇವಲ ತನ್ನ ಆತ್ಮನಲ್ಲಿ ಲೀನನಾಗುವಾಗ ಆತನ ಸಂಬಂಧವು ಕೇವಲ ತನ್ನ ಆತ್ಮನೊಡನೆ ಮಾತ್ರವೆಂದು, ಅನ್ಯ ವಸ್ತು ಸಂಬಂಧವು ಇಲ್ಲವೆಂದು ಸ್ಪಷ್ಟವಾಗುವುದು. ಆಗ ಮೋಹ ಪಿಶಾಚಿಯು ದೂರಾಗಿ ಮೋಕ್ಷ ರೂಪೀಕನ್ಯಾಮಣಿಯನ್ನು ವಶಪಡಿಸಿಕೊಳ್ಳುವನು.

ಭಾವಾರ್ಥ :- ದರ್ಪಣದಲ್ಲಿ ಸಕಲ ಪದಾರ್ಥಗಳು ಪ್ರತಿಬಿಂಬಿಸುತ್ತವೆ. ಅದರ ಮುಂದೆಯಿರುವ ವಸ್ತುಗಳು ಕಂಡು ಬರುತ್ತವೆ. ಆದರೆ ಆ ದರ್ಪಣದ ನಿಮಿತ್ತದಿಂದ ವಸ್ತುಗಳು ಪ್ರತಿಬಿಂಬಿಸುವಂತೆ ಆತ್ಮ ಜ್ಞಾನವು ಆತ್ಮನಲ್ಲಿಯೇ ಇರುವುದಲ್ಲದೆ ಆತ್ಮನನ್ನು ಬಿಟ್ಟು ಅನ್ಯವಸ್ತುಗಳನ್ನು ಪ್ರವೇಶಿಸುವುದಿಲ್ಲವು. ಮಹಾ ನಿರ್ಮಲತೆಯಿರುವ ಜ್ಞಾನದಲ್ಲಿ ಲೋಕಾಕಾಶದ ಸಮಸ್ತ ಪದಾರ್ಥಗಳು ಪ್ರತಿಬಿಂಬಿಸುವಂತೆ ಅಲೋಕಾಕಾಶವು ಕೂಡಾ ಪ್ರತಿಭಾಸಿಸುತ್ತದೆ. ಇದಕ್ಕೇನೆ ಜ್ಞಾನದ ವ್ಯಾಪಕತೆಯೆಂದು ಹೇಳುತ್ತಾರೆ. ಈ ರೀತಿಯಾಗಿ ಒಪ್ಪಿಕೊಳ್ಳುವುದರಿಂದ ಯಾವ ಜೀವದ ಸುಖದುಃಖಗಳು ಅನ್ಯ ಜೀವದೊಡನೆ ಸಂಬಂಧಿತವಾಗಲಾರವು. ಜೀವದ ನಿರಂಜನತ್ವವೆಂಬ ಲಕ್ಷಣವು ನಷ್ಟವಾಗಲಾರದು. ಆದ್ದರಿಂದ ಜೀವನು ಜ್ಞಾನದ ಅಪೇಕ್ಷೆಯಿಂದ ವ್ಯಾಪ್ತನು ಪ್ರದೇಶಗಳ ಅಪೇಕ್ಷೆಯಿಂದ ವ್ಯಾಪ್ತನಲ್ಲವು. ಪ್ರದೇಶಗಳ ಅಪೇಕ್ಷೆಯಿಂದ ಯದ್ಯಪಿ ಅಸಂಖ್ಯಾತ ಪ್ರದೇಶಗಳಿದ್ದಂತೆ, ಜೀವಕ್ಕೂ ಪ್ರದೇಶಗಳಿರುತ್ತವೆ. ಅದರಲ್ಲಿ ಸಂಕೋಚ ವಿಸ್ತಾರವಾಗುವ ಶಕ್ತಿಯಿದೆ. ಉದಾ :- ದೀಪವೊಂದನ್ನು ಒಂದು ಪಾತ್ರೆಯಲ್ಲಿ ಇಟ್ಟು ಬಿಟ್ಟರೆ ಅದರ ಪ್ರಕಾಶವು ಆ ಪಾತ್ರೆಯ ಆಕಾರದಷ್ಟೆ ಆಗುತ್ತದೆ ಮತ್ತೆ ಅದೇ ದೀಪವನ್ನು ಆ ಪಾತ್ರೆಯಿಂದ ಹೊರಗೆ ತೆಗೆದು ಒಂದು ಕೋಣೆಯಲ್ಲಿಟ್ಟುಬಿಟ್ಟರೆ ಆಗ ಅದರ ಪ್ರಕಾಶವು ಆ ಕೋಣೆಯಷ್ಟೆ ವ್ಯಾಪಿಸುವುದು. ಈ ಪ್ರಕಾರ ದೀಪದ ಪ್ರಕಾಶದಲ್ಲಿ ಸಂಕೋಚ ವಿಸ್ತಾರ ಗುಣವು ಇರುವಂತೆ ಜೀವನ ಪ್ರದೇಶದಲ್ಲಿಯು ಸಂಕೋಚ ವಿಸ್ತಾರವಾಗುವ ಶಕ್ತಿಯಿದೆ. ಜೀವನು ಚಿಕ್ಕ ಶರೀರವನ್ನು ಧಾರಣೆಮಾಡುವಾಗ ಅದರ ಪ್ರದೇಶ ಸಂಕುಚಿತವಾಗಿ ಆ ಶರೀರ ಪ್ರಮಾಣವಾಗುತ್ತದೆ. ಅದೇ ಜೀವನು ಯಾವಾಗ ದೊಡ್ಡ ಶರೀರವನ್ನು ಧರಿಸುವಾಗ ಅದರ ಪ್ರದೇಶಗಳು ವಿಸ್ತೃತವಾಗಿ ಆ ದೊಡ್ಡ ಶರೀರ ಸಮಾನನಾಗುತ್ತಾನೆ. ಪ್ರತಿಯೊಂದು ಜೀವದ ಪ್ರದೇಶ ಅಸಂಖ್ಯಾತ ಅವಗಾಹನ



ದೃಷ್ಟಿಯಿಂದ ಸಕಲ ಜೀವಗಳು ತಮ್ಮ ತಮ್ಮ ಶರೀರ ಪ್ರಮಾಣವಾಗಿರುತ್ತವೆ. ಮುಕ್ತ ಜೀವಗಳೆಲ್ಲವು ತಮ್ಮ ಅಂತಿಮ ಶರೀರ ಸಮಾನ ಅವಗಾಹನೆಯುಳ್ಳವುಗಳಾಗಿರುತ್ತವೆ. ಮೊದಲಿನ ಶರೀರದ ಅವಗಾಹನೆಯು ಕರ್ಮಗಳ ಉದಯದಿಂದ ಬದಲಾಯಿಸಿಕೊಂಡಿರುತ್ತದೆ. ಮತ್ತೆ ಸಕಲ ಕರ್ಮಗಳು ನಷ್ಟವಾಗುವುದೇ ಮೋಕ್ಷವು. ಆ ಶರೀರ ಅವಗಾಹನೆಯು ಇದ್ದಂತೆ ಇರುತ್ತದೆ. ಆದ್ದರಿಂದ ಮುಕ್ತಜೀವಗಳ ಅವಗಾಹನೆಯು ಅಂತಿಮ ಶರೀರ ಪ್ರಮಾಣವೆಂದು ತಿಳಿಯತಕ್ಕದ್ದು.

ಮುಂದಕ್ಕೆ ಶುದ್ಧೋಪಯೋಗದ ಪ್ರಾಪ್ತಿಗಾಗಿ ಯಾವ ಧರ್ಮವನ್ನು ಸ್ವೀಕರಿಸಬೇಕು.

ಪ್ರಶ್ನೆ :- ಶುದ್ಧೋಪಯೋಗಸಿದ್ಧ್ಯರ್ಥಂ ।
ಕೀದೃಕ್‌ಧರ್ಮೋ ವರೋ ವದ ॥

ಅರ್ಥ :- ಹೇ ಪರಮದೇವನೆ ! ಶುದ್ಧೋಪಯೋಗದ ಪ್ರಾಪ್ತಿಗಾಗಿ ಎಂಥ ಧರ್ಮವನ್ನು ಸ್ವೀಕರಿಸಬೇಕು ಎಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಶುದ್ಧೋಪಯೋಗೀ ಸುಗುರುರ್ಬ್ರವೀತಿ ।
ಹ್ಯೇಕೋऽಸ್ತಿಧರ್ಮೋ ವರವೀತರಾಗಃ ॥
ತ್ರಾತಾ ಸ ಲೋಕೇऽಖಿಲ ಪ್ರಾಣಿನಾಂ ವೈ ।
ಸಂಪದ್ವಿಧಾಯೀತಿ ವಿಪದ್ವಿನಾಶೀ ॥೨೨೫॥

ಪೂರ್ವೋಕ್ತರೀತೇಃ ಖಲು ಯೋ ವಿರುದ್ಧಃ ।
ಸ ಏವ ನಿಂದ್ಯೋऽಸ್ತಿ ಸರಾಗಧರ್ಮಃ ॥
ತಥಾಪಿ ಧರ್ಮೋऽಸ್ತ್ಯ ಶುಭೋಪಯೋಗೀ ।
ಹ್ಯಾಶ್ಚರ್ಯಮೇವಂ ಕುಗುರು ಬ್ರ್ರವೀತಿ ॥೨೨೬॥

ಜ್ಞಾತ್ವೇತಿ ನಿಂದ್ಯಂ ಚ ಸರಾಗಧರ್ಮಂ ।
ತ್ಯಕ್ತ್ವೈವಗೃಹ್ಣಾತು ವಿರಾಗಧರ್ಮಂ ॥
ಯತಸ್ತ್ರಿಲೋಕೇ ಸ್ವರಸಸ್ಯಪಾನಂ ।
ಸ್ಯಾಚ್ಛುದ್ಧ ಚಿದ್ರೂಪ ಸುಖಸ್ಯಚರ್ಚಾ ॥೨೨೭॥

**ಅರ್ಥ** :- ಶುದ್ಧೋಪಯೋಗವನ್ನು ಧರಿಸಿರುವ ಸದ್ಗುರುಗಳು ಈ ಸಂಸಾರದಲ್ಲಿ ವೀತರಾಗಧರ್ಮವು ಸರ್ವಶ್ರೇಷ್ಠವೂ ಸಕಲ ಸಂಸಾರೀ ಜೀವಗಳ ರಕ್ಷಕವೂ ಆತ್ಮೀಯ ಅನಂತ ಚತುಷ್ಟಯಾದಿ ಸಕಲ ವಿಭೂತಿಗಳನ್ನೀಯುವುದೂ, ತಾಪತ್ರಯಗಳನ್ನು ನಾಶಮಾಡುವುದೂ ಆಗಿರುತ್ತದೆ. ಇದಕ್ಕೆ ವಿರುದ್ಧ ನಿಂದನೀಯವೂ ಆದ ಧರ್ಮವು, ಸರಾಗ ಧರ್ಮವು. ಅಶುಭೋಪಯೋಗವನ್ನು ಧರಿಸಿರುವ ಕುಗುರುಗಳು ಸರಾಗಧರ್ಮವನ್ನೇ ನಿಜವಾದ ಧರ್ಮವನ್ನು ತಿಳಿಯುತ್ತಾರೆ. ಇದು ಆಶ್ಚರ್ಯದ ಸಂಗತಿಯಾಗಿರುವುದು. ಭವ್ಯಾತ್ಮರು ನಿಂದನೀಯ ಸರಾಗಧರ್ಮವನ್ನು ತ್ಯಜಿಸಿ ಪಾವನ ವೀತರಾಗ ಧರ್ಮವೆಂದು ಧಾರಣೆಮಾಡಬೇಕು. ಆದರಿಂದ ತ್ರಿಲೋಕಶ್ರೇಷ್ಠ ಶುದ್ಧಾತ್ಮ ಜನ್ಯ ಪರಮ ರಸಾಮೃತದ ಪಾನಯುಕ್ತತೆಯೂ ಮತ್ತು ಚಿದಾನಂದಮಯ ಶುದ್ಧಾತ್ಮನ ಸರ್ವೋಪರಿ ಸುಖದ ಪ್ರಾಪ್ತಿಯೂ ಆಗುವುದು.

**ಭಾವಾರ್ಥ** :- ಧರ್ಮವು ಸರಾಗಧರ್ಮವೆಂದೂ, ವೀತರಾಗಧರ್ಮವೆಂದೂ ಎರಡು ವಿಧ, ಸರಾಗಧರ್ಮವನ್ನು ಗೃಹಸ್ಥರು ಮತ್ತು ಮುನಿಗಳು ಸ್ವೀಕರಿಸುತ್ತಾರೆ. ವೀತರಾಗಧರ್ಮವನ್ನು ಸ್ವೀಕರಿಸುವವರು ಕೇವಲ ಸರ್ವಶ್ರೇಷ್ಠ ಮುನಿವರ್ಯರು. ಸಮಸ್ತ ಮೋಹವನ್ನು ಬಿಟ್ಟು ಕೇವಲ ಶುದ್ಧಾತ್ಮನಲ್ಲಿ ತನ್ಮಯನಾಗುವವರಿಗೆ ವೀತರಾಗಧರ್ಮ ಪ್ರಾಪ್ತಿಯಾಗುವುದು. ಈ ಧರ್ಮವು ಸಾಕ್ಷಾತ್ ಚತುರ್ಗತಿಸಂಬಂಧ ದುಃಖನಾಶಕವೂ, ಅನಂತ ಚತುಷ್ಟಯರೂಪ ವಿಭೂತಿಯನ್ನು ಉಂಟುಮಾಡುವುದು. ಮತ್ತು ಅಂತ್ಯದಲ್ಲಿ ಮೋಕ್ಷಲಕ್ಷ್ಮೀದಾಯಕವೂ ಆಗುತ್ತದೆ.

ಸರಾಗಧರ್ಮವು ಏಕದೇಶಧರ್ಮ, ಪೂರ್ಣಧರ್ಮವೆಂದೂ ಎರಡು ವಿಧವಾಗಿರುತ್ತದೆ. ಗೃಹಸ್ಥ ಅಥವಾ ಶ್ರಾವಕರು ಏಕದೇಶಧರ್ಮವನ್ನು ಪಾಲಿಸುತ್ತಾರೆ. ಮತ್ತು ಮುನಿಗಳು ವೀತರಾಗಧರ್ಮವನ್ನು ಧಾರಣೆಮಾಡುತ್ತಾರೆ. ಯಾವ ಆತ್ಮನು ಸಮಸ್ತಮೋಹವನ್ನು ತ್ಯಜಿಸಿ ಕೇವಲ ತನ್ನ ಶುದ್ಧಾತ್ಮನಲ್ಲಿ ತನ್ಮಯನಾಗಿರುವ ಆತ್ಮನಿಗೆ ವೀತರಾಗಧರ್ಮದ ಪ್ರಾಪ್ತಿಯಾಗುವುದು. ಇದು ಸಾಕ್ಷಾತ್ ಚತುರ್ಗತಿ ಸಂಬಂಧ ದುಃಖಗಳಿಂದ ರಕ್ಷಿಸಿ ಅನಂತ ಜ್ಞಾನಾದಿ



ಅನಂತ ಚತುಷ್ಟಯರೂಪ ಆತ್ಮೀಯ ವಿಭೂತಿಯನ್ನುಂಟುಮಾಡಿ ಮೋಕ್ಷಕ್ಕೆ ಕಾರಣೀಭೂತವಾಗಿರುತ್ತದೆ.

ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತಗಳನ್ನು ಪರಿಪಾಲಿಸುತ್ತ ಅಂತ್ಯದಲ್ಲಿ ಸಮಾಧಿ ಮರಣವನ್ನು ಧರಿಸುವುದು ಗೃಹಸ್ಥರ ಧರ್ಮವಾಗಿದೆ. ಹಾಗೆ ಪಂಚಮಹಾವ್ರತ, ಮೂರುಗುಪ್ತಿ, ಐದುಸಮಿತಿ ಈ ಹದಿಮೂರು ಪ್ರಕಾರದ ಚಾರಿತ್ರವು ಪೂರ್ಣಸರಾಗಧರ್ಮವಾಗಿದೆ. ಅಥವಾ ಜೀವಗಳಲ್ಲಿ ರಾಗಾವಸ್ಥೆಯಿರುವವರೆಗೆ ಸರಾಗಧರ್ಮವೇ ಇರುವುದು. ರಾಗದ್ವೇಷಗಳು ಬಿಟ್ಟುಹೋದ ನಂತರವೇ ವೀತರಾಗಧರ್ಮದ ಪ್ರಾದುರ್ಭಾವವಾಗುವುದು. ಈ ಸರಾಗ ಧರ್ಮವು ಪರಂಪರಾರೂಪವಾಗಿ ಮೋಕ್ಷಕ್ಕೆ ಕಾರಣವಾಗಿದೆ. ವೀತರಾಗ ಧರ್ಮವು ಸಾಕ್ಷಾತ್ ಕಾರಣೀಭೂತವಾಗಿರುತ್ತದೆ. ಸರಾಗಧರ್ಮ, ವೀತರಾಗ ಧರ್ಮಗಳೆರಡರಿಂದ ವಿರುದ್ಧ ಧರ್ಮಕ್ಕೆ ಮಿಥ್ಯಾಧರ್ಮವೆಂದು ಹೇಳುತ್ತಾರೆ. ಇದು ತೀವ್ರರಾಗದ್ವೇಷರೂಪವಾಗಿರುತ್ತದೆ. ಸಂಸಾರದುಃಖದ ಉಗಮ ಸ್ಥಾನವೂ ಆಗಿರುತ್ತದೆ. ಈ ಮಿಥ್ಯಾಧರ್ಮವು ಅಶುಭೋಪಯೋಗಧಾರಕ ಜೀವಗಳಿಗೆ ಉಂಟಾಗುತ್ತದೆ. ಮಿಥ್ಯಾಗುರುಗಳು ಕೂಡಾ ಉಪದೇಶವನ್ನೀಯುವುದುಂಟು ಆದರೆ ಭವ್ಯಜೀವಗಳು ಇದರ ಪೂರ್ವಾಪರ ವಿಚಾರವಿನಿಮಯದಿಂದ ಮಿಥ್ಯಾಧರ್ಮವನ್ನು ತ್ಯಜಿಸಿ ಸರಾಗಧರ್ಮವನ್ನು ಸ್ವೀಕರಿಸಿ ಕ್ರಮೇಣ ಅಭ್ಯಾಸಬಲದಿಂದ ರಾಗದ್ವೇಷವನ್ನು ಪೂರ್ಣರೀತ್ಯಾ ನಷ್ಟಗೊಳಿಸಿ ಸರಾಗಧರ್ಮವನ್ನೂ ಕೂಡಾ ಬಿಟ್ಟು ಅತಿಶ್ರೇಷ್ಠವೂ, ಪರಿಶುದ್ಧವೂ ಆದ ವೀತರಾಗ ಧರ್ಮವನ್ನು ಧರಿಸಬೇಕು. ಇದೇ ಆತ್ಮಕಲ್ಯಾಣದ ಪ್ರಧಾನಮಾರ್ಗವಾಗಿರುತ್ತದೆ.

ಮುಂದಕ್ಕೆ ಶುದ್ಧೋಪಯೋಗ ವಿಚಾರ ವಿವರಣೆ.

**ಪ್ರಶ್ನೆ** :- ಶುದ್ಧೋಪಯೋಗ ಸಿದ್ಧ್ಯರ್ಥಂ ವಿಚಾರಃ ಕ್ರಿಯತೇ ಪುನಃ ॥

**ಅರ್ಥ** :- ಈಗ ಶುದ್ಧೋಪಯೋಗದ ಪ್ರಾಪ್ತಿಯ ಪುನಃ ಸ್ವಲ್ಪ ವಿಚಾರವು ವಿವರಿಸಲ್ಪಡುವುದು.

ಉತ್ತರ :- ದ್ರವ್ಯಾದಿ ಕರ್ಮಣಃ ಸ್ವಾತ್ಮರಾಗಾದಿ ಭಾವಕರ್ಮಣಃ ।
ದೇಹಾದಿ ಕರ್ಮಣೋಽತ್ಯಂತ ಭಿನ್ನಚಿದ್ರೂಪ ನಾಯಕಃ ॥೨೨೮॥

ಶುದ್ಧೋಪಯೋಗಿನಃ ಸಾಧೋಃ ಸ್ವಭಾವಾದಿತಿ ನಿಶ್ಚಯಃ ।
ಚಿತ್ತೇ ಮೇ ಜಾಯತೇ ಚೈವ ಮಗಾಧೋಮಹಿಮಾ ಹ್ಯಹೋ ॥೨೨೯॥

ಅರ್ಥ :- ಶುದ್ಧ ಚಿದಾನಂದ ಸ್ವರೂಪನಾದ ನನ್ನಾತ್ಮನು ಜ್ಞಾನಾವರಣ, ದರ್ಶನಾವರಣ ಮೊದಲಾದೆಂಟು ದ್ರವ್ಯ ಕರ್ಮಗಳಿಂದಲೂ, ರಾಗ ದ್ವೇಷಾದಿ ಭಾವ ಕರ್ಮಗಳಿಂದಲೂ ಸರ್ವಥಾ ಭಿನ್ನನಾಗಿರುತ್ತಾನೆ. ಮತ್ತು ಶರೀರಾದಿ ನೋಕರ್ಮಗಳಿಂದಲೂ ಭಿನ್ನನೇ ಆಗಿರುತ್ತಾನೆ. ಯಾವ ಮುನಿಯು ಶುದ್ಧೋಪಯೋಗದಿಂದ ವಿಭೂಷಿತನಾಗುವಾಗ ಶುದ್ಧಾತ್ಮ ಸ್ವರೂಪದ ಮಹತ್ವವು ಅಗಾಧವೆಂದೂ ನಿಶ್ಚಯವಾಗುವುದು.

ಭಾವಾರ್ಥ :- ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀಯ, ಆಯುಷ್ಯ, ನಾಮ, ಗೋತ್ರ, ಅಂತರಾಯಗಳೆಂಬ ಎಂಟು ಕರ್ಮಗಳು. ಆ ಎಂಟು ಕರ್ಮಗಳ ಉತ್ತರ ಭೇದಗಳಾದ ನೂರು ನಲವತ್ತೆಂಟು ಭೇದಗಳು ದ್ರವ್ಯ ಕರ್ಮಗಳಾಗಿರುತ್ತವೆ. ಆತ್ಮನ ಯಾವ ಪರಿಣಾಮಗಳಿಂದ ಯಾವ ದ್ರವ್ಯ ಕರ್ಮಗಳು ಬರುತ್ತಿರುವುವೊ, ಅವೆಲ್ಲವು ರಾಗದ್ವೇಷ , ಮೋಹ, ಕ್ರೋಧ, ಮಾನ, ಮಾಯಾ, ಲೋಭ ಮೊದಲಾದವು ಭಾವ ಕರ್ಮಗಳಾಗಿರುತ್ತವೆ. ಹಾಗೆ ಯಾವ ಪುದ್ಗಲ ವರ್ಗಣೆಗಳಾದ ಔದಾರಿಕ, ವೈಕ್ರಿಯಕ, ಆಹಾರಕ ಈ, ಮೂರು ಶರೀರಗಳ ರಚನೆಯು, ಆರು ಪರ್ಯಾಪ್ತಿಗಳೆಲ್ಲವು ನೋಕರ್ಮಗಳಾಗಿರುತ್ತವೆ. ಈ ಪ್ರಕಾರ ಕರ್ಮಗಳು ದ್ರವ್ಯಕರ್ಮ, ಭಾವಕರ್ಮ ಮತ್ತು ನೋಕರ್ಮಗಳೆಂದು ಮೂರು ವಿಧವಾಗಿರುತ್ತವೆ. ಈ ಮೂರು ವಿಧ ಕರ್ಮಗಳು ಅಶುದ್ಧಜೀವಗಳಿಗೆ ಇರುತ್ತವೆ. ಈ ನನ್ನ ಆತ್ಮನು ಶುದ್ಧನಾಗಿರುತ್ತಾನೆ. ಆದ್ದರಿಂದ ದ್ರವ್ಯಕರ್ಮ, ಭಾವಕರ್ಮ ಮತ್ತು ನೋಕರ್ಮಗಳಿಂದ ರಹಿತನಾಗಿರುತ್ತಾನೆ. ಆದರೂ ಅಂತಹ ನಿಶ್ಚಯ ಶುದ್ಧೋಪಯೋಗವನ್ನು ಧಾರಣೆಮಾಡುವ ಶ್ರೇಷ್ಠ ಮುನಿಗಳಿಗೆ ಈ ಭಾವನೆಯುಂಟಾಗುವುದು. ಶುದ್ಧಾತ್ಮಮಹಿಮೆಯ ಬೋಧವಾಗುವುದು. ಆಗ ಸಕಲ ಕರ್ಮಗಳು ನಾಶವಾಗಿ ಮೋಕ್ಷಲಕ್ಷ್ಮಿಯನ್ನು ಪ್ರಾಪ್ತ ಮಾಡಿಕೊಳ್ಳುವರು.



ಮುಂದಕ್ಕೆ ಬಾಹ್ಯಪದಾರ್ಥಗಳ ತ್ಯಾಗದಿಂದ ಲಾಭವಾಗುವುದೋ ಇಲ್ಲವೋ ಎಂಬುದನ್ನು ಸ್ಪಷ್ಟೀಕರಿಸುತ್ತಾರೆ.

ಪ್ರಶ್ನೆ :- ಸ್ಯಾದ್ಬಾಹ್ಯವಸ್ತುನಸ್ತ್ಯಾಗಾತ್ಕೋಽಪಿ ಲಾಭೋ ನ ಮೇ ವದ ।

ಅರ್ಥ :- ಹೇ ಭಗವಾನ್ ! ಬಾಹ್ಯವಸ್ತುಗಳನ್ನು ತ್ಯಜಿಸುವುದರಿಂದ ಲಾಭವಾಗುವುದೋ, ಇಲ್ಲವೊ ಎಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಬಾಹ್ಯಾದಿವಸ್ತು ಲಾಭೇನಕೋಪಿ ಲಾಭೋ ಭವೇನ್ನಹಿ ।
ನ ತದಲಾಭತೋ ಹಾನಿರ್ಮಾನಾಪಮಾನತಸ್ತಥಾ ॥೨೩೦॥

ಏವಂ ಸ್ಯಾನ್ನಿಶ್ಚಯೋ ಯಸ್ಯ ಸ ಸ್ಯಾತ್ಸ್ವರ್ಮೋಕ್ಷದಾಯಕಃ ।
ಸೋಪಿ ಶುದ್ಧೋಪಯೋಗೀತಿಜ್ಞೇಯಃ ಸಿದ್ಧ್ಯೈ ಪ್ರಮಾಣತಃ ॥

ಅರ್ಥ :- ನನ್ನ ಆತ್ಮನಿಗೆ ಬಾಹ್ಯ ಪದಾರ್ಥಗಳ ಪ್ರಾಪ್ತಿಯಿಂದ ಲಾಭವಾಗಲಿ, ಪ್ರಾಪ್ತಿಯಾಗದಿರುವುದರಿಂದ ಹಾನಿಯಾಗಲಿ ಇಲ್ಲವು. ಮಾನ ಸನ್ಮಾನದಿಂದ ಯಾವ ಗುಣವಾಗಲಿ, ಅಪಮಾನ, ನಿಂದೆಯಿಂದ ದೋಷವಾಗಲಿ ಇಲ್ಲವು. ಹೀಗೆಂದು ನಿಶ್ಚಯಿಸಿಕೊಳ್ಳುವ ಮಹಾತ್ಮನು ಸ್ವರ್ಗ ಮೋಕ್ಷಾದಿ ಸುಖವನ್ನೆ ಪಡೆಯುವನು ಮತ್ತು ಸ್ವರ್ಗ ಮೋಕ್ಷಸುಖ ದಾತೃವೂ ಆಗುವನು. ಅಂತಹವನಿಗೆ ಶುದ್ಧೋಪಯೋಗಧಾರಕನೆಂದು ಹೇಳುತ್ತಾರೆ. ಅವನು ನಿಶ್ಚಯವಾಗಿ ಸಿದ್ಧಪದವಿಯ ಅಧಿಕಾರಿಯಾಗುವನೆಂಬುದು ಪ್ರಮಾಣದಿಂದ ನಿಶ್ಚಯವಾಗುವುದು.

ಭಾವಾರ್ಥ :- ಧನಕನಕ ಕುಟುಂಬ ರಾಜ್ಯಾದಿ ಸಂಸಾರದ ಸಕಲ ಸಾಮಗ್ರಿಗಳು ಬಾಹ್ಯವಸ್ತುಗಳು ಮಾತ್ರವಲ್ಲ ; ಶರೀರವೂ ಕೂಡಾ ಬಾಹ್ಯವೇ. ಅದರಂತೆ ರಾಗದ್ವೇಷಾದಿ ಭಾವಗಳು ಆತ್ಮ ಶುದ್ಧ ಸ್ವಭಾವದಿಂದ ಭಿನ್ನವೂ ಬಾಹ್ಯವೂ ಆಗಿರುತ್ತವೆ. ಈ ಎಲ್ಲ ಪದರ್ಥಾಗಳು ಪ್ರಾಪ್ತಿಯಾಗಿದ್ದರೂ ಆತ್ಮನಿಗೆ ಯಾವ ಲಾಭವಾಗಲಿ, ಪ್ರಾಪ್ತಿಯಾಗದಿದ್ದರೂ ನಷ್ಟವಾಗಲಿ ಇಲ್ಲ. ಒಂದುವೇಳೆ ನಿಶ್ಚಯ ದೃಷ್ಟಿಯಿಂದ ವಿಚಾರಿಸಿದರೆ ಬಾಹ್ಯ ಪದಾರ್ಥಗಳ ಮೋಹವೆ ಆತ್ಮನ ಶುದ್ಧ ಸ್ವರೂಪತೆಯನ್ನು ನಷ್ಟಗೊಳಿಸುತ್ತವೆ. ಆದರೂ ಯಾವಾಗ ಆತ್ಮನು ತನ್ನ ನಿಜ ಸ್ವರೂಪವನ್ನರಿಯುವನೋ ಬಾಹ್ಯ ಪದಾರ್ಥಗಳೆಲ್ಲವು ತನ್ನಿಂದ ಭಿನ್ನ

ವೆಂದೂ ದೃಢಪಡಿಸಿಕೊಂಡು ಪರವಸ್ತುಗಳ ಮೋಹವನ್ನು ಹೊಡೆದೋಡಿಸುವನು. ಅವುಗಳಿಂದ ಲಾಭಾಲಾಭವಾಗಲಿ ಆಗುವುದಿಲ್ಲವು. ಇದೇ ರೀತಿ ಮಾನ, ಅಪಮಾನಗಳಿಂದ ತಿಳಿದಿರಬೇಕು. ಹೀಗೆ ಸಕಲ ಬಾಹ್ಯ ವಸ್ತುಗಳಿಂದ ಆತ್ಮನ ಸರ್ವಥಾ ಭಿನ್ನತ್ವ ಅವಸ್ಥೆಯ ಪ್ರಾಪ್ತಿಯಾಗುವುದಕ್ಕೆ ಶುದ್ಧೋಪಯೋಗವೆಂದು ಹೇಳುತ್ತಾರೆ. ಇಂತಹ ಶುದ್ಧೋಪಯೋಗವೇ ಸಾಕ್ಷಾತ್ ಮೋಕ್ಷಕ್ಕೆ ಕಾರಣವಾಗಿರುತ್ತದೆ. ಈ ವಿಚಾರವನ್ನು ಮೊದಲು ತಿಳಿದು ಮೋಹವನ್ನು ಬಿಟ್ಟು ಬಿಡಬೇಕು. ಮೋಹವು ಬಿಟ್ಟು ಹೋದ ಮೇಲೆಯೆ ಬಾಹ್ಯ ಪದಾರ್ಥಗಳ ಸಂಬಂಧವು ಸ್ವಯಂ ಬಿಟ್ಟು ಹೋಗಿ ಶಾಶ್ವತ ಮೋಕ್ಷ ಸುಖ ಪ್ರಾಪ್ತಿಯಾಗುವುದು.

ಮುಂದಕ್ಕೆ ಧ್ಯಾತಾ, ಧ್ಯಾನ, ಮತ್ತು ಧ್ಯೇಯಗಳ ಭೇದಾಭೇದಗಳ ಸ್ಪಷ್ಟೀಕರಣ.

ಪ್ರಶ್ನೆ :- ಧ್ಯಾತೃಧ್ಯಾನಸುಧ್ಯೇಯೇಷು ಭೇದೋऽಸ್ತಿವಾ ನ ಮೇ ವದ ।

ಅರ್ಥ :- ಹೇ ಪರಮ ಗುರುವೇ! ಧ್ಯಾತಾ, ಧ್ಯಾನ, ಮತ್ತು ಧ್ಯೇಯಗಳಲ್ಲಿ ಅಂತರವೇನಾದರು ಇದೆಯೆ ಅಥವಾ ಇಲ್ಲವೆ ಎಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಧ್ಯಾನಂ ಧ್ಯಾತಾಚ ಧ್ಯೇಯೋಪಿ ಭಿನ್ನೋಸ್ತಿ ವ್ಯವಹಾರತಃ ।
ಧ್ಯಾತಾಧ್ಯಾನಂ ಸ್ವಯಂ ಸ್ವಾತ್ಮಾಜ್ಞೇಯೋ ಧ್ಯೇಯೋಪಿ
ನಿಶ್ಚಯಾತ್ ॥೨೩.೨॥

ಅರ್ಥ :- ವ್ಯವಹಾರದೃಷ್ಟಿಯಿಂದ ವಿಚಾರಿಸುವಾಗ ಧ್ಯಾತ, ಧ್ಯಾನ ಮತ್ತು ಧ್ಯೇಯ ಇವು ಮೂರು ಭಿನ್ನಭಿನ್ನಗಳಾಗಿರುತ್ತವೆ. ನಿಶ್ಚಯನಯದಿಂದ ವಿಚಾರಿಸುವಾಗ ನನ್ನ ಈ ಶುದ್ಧಾತ್ಮನು ಸ್ವಯಂ ಧ್ಯಾತೃವು, ಸ್ವಯಂ ಧ್ಯಾನ ರೂಪನು ಮತ್ತು ಸ್ವಯಂ ಧ್ಯೇಯನೂ ಆಗಿರುತ್ತಾನೆ.

ಭಾವಾರ್ಥ :- ಧ್ಯಾನಮಾಡುವವನಿಗೆ ಧ್ಯಾತಾ ಎಂದೂ, ಯಾವ ಪದಾರ್ಥಗಳ ಧ್ಯಾನಿಸಲಾಗುವುದಕ್ಕೆ ಧ್ಯೇಯವೆಂದೂ, ಯಾವ ಧ್ಯಾನ ಅಥವಾ ಚಿಂತನೆ ಮಾಡಲಾಗುವುದೋ ಅದಕ್ಕೆ ಧ್ಯಾನವೆಂದೂ ಹೇಳುತ್ತಾರೆ.



ಉದಾ:- ಸರ್ವಜ್ಞ ದೇವನ ಚಿಂತಿಸುವ (ಧ್ಯಾನ) ಮಾಡುವ ಭವ್ಯ ಜೀವನು ಧ್ಯಾತೃವು, ಭಗವಾನ ಜಿನೇಂದ್ರ ದೇವನು ಧ್ಯೇಯವು ಮತ್ತು ಆತ ತನ್ನ ಮಾನಸಿಕ ಚಿಂತನ ರೂಪ ಕ್ರಿಯೆಗೆ ಧ್ಯಾನವೆಂದೂ ಹೇಳುತ್ತಾರೆ. ಹೀಗೆ ವ್ಯವಹಾರ ದೃಷ್ಟಿಯಿಂದ ಧ್ಯಾತಾ, ಧ್ಯೇಯ ಮತ್ತು ಧ್ಯಾನ ಇವು ಮೂರು ಭಿನ್ನಭಿನ್ನಗಳೇ ಆದರೂ ಈ ತನ್ನ ಆತ್ಮನು ತನ್ನ ಆತ್ಮನ ಮೂಲಕವೇ ಶುದ್ಧಾತ್ಮನ ಧ್ಯಾನ ಗೈಯುವನು. ಅಲ್ಲಿ ಧ್ಯಾತಾ, ಧ್ಯಾನ ಮತ್ತು ಧ್ಯೇಯ ಇವು ಮೂರು ಒಂದೇ ಶುದ್ಧಾತ್ಮನ ಸ್ವರೂಪಗಳಾಗಿರುತ್ತವೆ. ಆದ್ದರಿಂದ ಇವು ಮೂರು ಅಭಿನ್ನಗಳೆಂದು ಸಿದ್ಧವಾಗುತ್ತವೆ. ಯಾಕೆಂದರೆ ಯಾವ ಧ್ಯಾನವನ್ನು ಗೈಯುವ ಶುದ್ಧಾತ್ಮನೆ ಅದೇ ತನ್ನ ಶುದ್ಧಾತ್ಮನ ಧ್ಯಾನಮಾಡುತ್ತಾನೆ. ಮತ್ತೆ ಅದೇ ಶುದ್ಧಾತ್ಮನ ಮೂಲಕವೇ ಅದರಲ್ಲಿಯೇ ತನ್ಮಯನಾಗುತ್ತಾನೆ. ಇದರಿಂದ ಶುದ್ಧ ನಿಶ್ಚಯ ನಯದಿಂದ ಮೂರು (ಧ್ಯಾತಾ, ಧ್ಯೇಯ ಧ್ಯಾನ) ಏಕರೂಪವಾಗಿರುತ್ತವೆ. ಶುದ್ಧಾತ್ಮನು ಧ್ಯಾತಾ, ಅವನೇ ಧ್ಯೇಯ ಮತ್ತು ಅದೇ ಧ್ಯಾನವಾಗಿರುತ್ತವೆ. ಅರ್ಥಾತ್ ನಿಶ್ಚಯದಿಂದ ಧ್ಯಾತ, ಧ್ಯೇಯ ಮತ್ತು ಧ್ಯಾನದಲ್ಲಿ ಯಾವ ಭೇದವಿಲ್ಲವು.

ಮುಂದಕ್ಕೆ ಧ್ಯಾತಾ, ಧ್ಯೇಯ, ಧ್ಯಾನಗಳ ಚಿನ್ಹೆಗಳನ್ನು ವಿವರಿಸುತ್ತಾರೆ.

ಪ್ರಶ್ನೆ :- ಧ್ಯಾತುರ್ಧ್ಯಾನಸ್ಯ ಧ್ಯೇಯಸ್ಯ ಕಿಂ ಚಿನ್ಹಂ ಮೇ ಗುರೋ ! ವದ ।

ಅರ್ಥ :- ಹೇ ಸದ್ಗುರುವೇ ! ದಯದೋರಿ ಧ್ಯಾತಾ, ಧ್ಯಾನ ಮತ್ತು ಧ್ಯೇಯಗಳ ಚಿನ್ಹೆ ಅಥವಾ ಸ್ವರೂಪವೇನೆಂಬುದನ್ನು ಅಪ್ಪಣೆಕೊಡಿಸಬೇಕು.

ಉತ್ತರ :- ಯೋ ಧ್ಯಾಯತಿ ಶುದ್ಧಾತ್ಮಾಧ್ಯಾತಾಸ್ವಾತ್ಮೈವ ಸ್ವಾತ್ಮನಿ ।
ಶುದ್ಧಾತ್ಮಾನಂ ಸ್ವಕೀಯಂ ಚ ತದ್‌ಧ್ಯೇಯಂ
ಧ್ಯಾಯತೀತಿ ವಾ ॥೨೩.೩॥
ಧ್ಯಾನಂ ಸ ಏವ ಶುದ್ಧಾತ್ಮಾ ಯತಸ್ತೇನೈವ ಚಿಂತ್ಯತೇ ।
ಪ್ರೋಕ್ತಂ ಚ ಸ್ವಾತ್ಮತುಷ್ಟೇನ ಕುಂಥುಸಾಗರಸೂರಿಣಾ ॥೨೩.೪॥

ಅರ್ಥ :- ಯಾವ ಶುದ್ಧಾತ್ಮಾನು ತನ್ನ ಧ್ಯಾನದಲ್ಲಿರುವ ಶುದ್ಧಾತ್ಮನೇ ಧ್ಯಾತಾ, ಹಾಗೆಯೆ ಆ ಆತ್ಮನು ತನ್ನ ಶುದ್ಧಾತ್ಮನ ಚಿಂತನೆಮಾಡುವುದರಿಂದ ಅದೇ ಧ್ಯೇಯವು. ಮತ್ತೆ ಅದೇ ಶುದ್ಧಾತ್ಮವು ತನ್ನ ಶುದ್ಧಾತ್ಮನ ಮೂಲಕ ಚಿಂತಿಸುವುದರಿಂದ ಧ್ಯಾನವು. ಹೀಗೆ ತನ್ನಾತ್ಮನಲ್ಲಿ ಸಂತುಷ್ಟರಾದ ಆಚಾರ್ಯ ಶ್ರೀ ಕುಂಥುಸಾಗರ ಮಹಾಮುನಿಗಳು ನಿರೂಪಿಸುತ್ತಾರೆ.

ಭಾವಾರ್ಥ :- ಧ್ಯಾನಗೈಯುವನು ಧ್ಯಾತೃವು. ಆತ ಯಾವ ವಸ್ತುವನ್ನು ಧ್ಯಾನಿಸುವನೋ ಅದು ಧ್ಯೇಯವು. ಧ್ಯಾನಮಾಡುವುದು ಅಥವಾ ಚಿಂತನೆಮಾಡುವುದು ಧ್ಯಾನವು. ಇಲ್ಲಿ ತನ್ನ ಶುದ್ಧ ಆತ್ಮನೇ ಧ್ಯಾನಿಸುವವನು. ತನ್ನ ಶುದ್ಧಾತ್ಮ ಧ್ಯಾನವನ್ನೇ ಮಾಡುವನು. ಮತ್ತೆ ಅದೇ ಶುದ್ಧಾತ್ಮನಲ್ಲಿ ತನ್ಮಯನಾಗಿ ಅದರ ಧ್ಯಾನವನ್ನೇ ಮಾಡುತ್ತಾನೆ. ಆದ್ದರಿಂದ ತನ್ನಾತ್ಮನೇ ಧ್ಯಾತೃವು ಅವನೇ ಧ್ಯೇಯವು ಅದೇ ಶುದ್ಧಾತ್ಮ ಧ್ಯಾನವಾಗಿರುತ್ತದೆ. ಆ ಧ್ಯಾನದಲ್ಲಿ ಯಾವ ವಿಧದ ಸಂಕಲ್ಪವಾಗಲಿ, ವಿಕಲ್ಪವಾಗಲಿ ಇಲ್ಲವು. ಅವನು ಶುದ್ಧಾತ್ಮನಲ್ಲಿ ತನ್ಮಯನಾಗಿ ನಿಶ್ಚಲ ಅವಸ್ಥೆಯನ್ನು ಧರಿಸುವನು. ಆದ್ದರಿಂದ ಆತನಲ್ಲಿ ಧ್ಯಾನ, ಧ್ಯೇಯ, ಮತ್ತು ಧ್ಯಾತೃವಿನಲ್ಲಿ ಯಾವ ರೀತಿಯ ವಿಕಲ್ಪವಾಗಲಿ ಇಲ್ಲವು. ಅವನು ಶುದ್ಧಾತ್ಮನಲ್ಲಿ ತನ್ಮಯನಾಗಿ ನಿಶ್ಚಲ ಅವಸ್ಥೆಯನ್ನು ಧರಿಸುವವನು. ಆದ್ದರಿಂದ ಆತನಲ್ಲಿ ಧ್ಯಾನ, ಧ್ಯೇಯ ಮತ್ತು ಧ್ಯಾತೃವಿನಲ್ಲಿ ಯಾವ ರೀತಿಯ ವಿಕಲ್ಪಗಳಿರುವುದಿಲ್ಲವು. ಈ ಮೂರು ಅವಸ್ಥೆಗಳು ಶುದ್ಧಾತ್ಮ ಸ್ವರೂಪಗಳಾಗಿರುತ್ತವೆ.

ಮುಂದಕ್ಕೆ ಶುದ್ಧೋಪಯೋಗದ ಸಿದ್ಧಿಗಾಗಿ ಯಾವ ಭಾವನೆಯನ್ನು ಭಾವಿಸಬೇಕೆಂಬುದನ್ನು ವಿವರಿಸುತ್ತಾರೆ.

ಪ್ರಶ್ನೆ :- ಭಾವನಾ ಕೀದೃಶೀ ಕಾರ್ಯಾ ಶುದ್ಧೋಪಯೋಗಸಿದ್ಧಯೇ ।

ಅರ್ಥ :- ಹೇ ದಯಾನಿಧೇ ! ದಯವಿಟ್ಟು ಶುದ್ಧೋಪಯೋಗವನ್ನು ಪಡೆಯಬೇಕಾದರೆ ಯಾವ ಭಾವನೆಯನ್ನಿಟ್ಟುಕೊಳ್ಳಬೇಕು.

ಉತ್ತರ :- ನಿತ್ಯೇ ನಿಜಾನಂದಪದೇ ನಿಷದ್ಯಾ ।
ಶುದ್ಧೇಽಸ್ತಿ ಚರ್ಯಾಪಿ ನಿಜಪ್ರದೇಶೇ ॥



ಚಿದ್ರೂಪ ಶಯ್ಯಾಶಯನಂ ಸದಾ ಮೇ ।
ಶುದ್ಧೋಪ ಯೋಗೀತಿ ಸ ಯಸ್ಯ ಭಾವಃ ॥೨೩೫॥

ಅರ್ಥ :- ಯಾವ ಯೋಗಿಯು ಸದಾಕಾಲವು ತನ್ನ ಚಿದಾನಂದ ಸ್ವರೂಪನಾದ ಶುದ್ಧಾತ್ಮನಲ್ಲಿ ನಿಷದ್ಯಾ (ಧ್ಯಾನಕ್ಕಾಗಿ ನಿಯಮಿತ ಸಮಯದ ವರೆಗೆ ಸ್ವೀಕರಿಸಲ್ಪಟ್ಟ ಆಸನದಿಂದ ಚ್ಯುತನಾಗದಿರುವುದು)ಯನ್ನು ತಿಳಿದು ಕೊಳ್ಳುವುದು. ತನ್ನ ಶುದ್ಧಾತ್ಮನ ಪ್ರದೇಶಗಳಲ್ಲಿ ಚರ್ಯಾಗಮನಾ ಗಮನ ರೂಪವನ್ನು ವಿಚಾರಿಸುವುದು. ಮತ್ತು ಶುದ್ಧ ಸ್ವರೂಪ ಆತ್ಮನನ್ನೆ ಶಯ್ಯಾ ರೂಪನೆಂದು ತಿಳಿದು ಅದರಲ್ಲಿಯೆ ಶಯನಮಾಡಿಕೊಂಡಿರುತ್ತಾನೆಯೊ, ಇದೇ ರೀತಿಯಾಗಿ ಭಾವನೆಯನ್ನಿಟ್ಟುಕೊಳ್ಳುವವನೆ ಶುದ್ಧೋಪಯೋಗ ಧಾರಣೆಗೆ ಯೋಗ್ಯನೆಂದು ತಿಳಿಯಬೇಕು.

ಭಾವಾರ್ಥ :- ಈ ಶುದ್ಧಾತ್ಮನು ಧ್ಯಾತಾ, ಧ್ಯಾನ ಮತ್ತು ಧ್ಯೇಯಗಳಲ್ಲಿ ವಿಕಲ್ಪವಿಲ್ಲದವನಾಗಿ ತನ್ನಾತ್ಮನ ಶುದ್ಧಸ್ವರೂಪದಲ್ಲಿ ದೃಢವಾಗಿ ತನ್ಮಯನಾಗುತ್ತಾನೆ. ಮತ್ತೆ ಆತ್ಮನು ಶುದ್ಧಸ್ವರೂಪದಲ್ಲಿ ಸಂಚರಿಸುವನು ಕುಳಿತುಕೊಳ್ಳುವನು ವಿಶ್ರಮಿಸುವನು. ಯದ್ಯಪಿ ಆತ್ಮನಲ್ಲಿ ಚರ್ಯೆ, ಶಯ್ಯಾ, ನಿಷದ್ಯಾದಿಗಳಿಲ್ಲದೆ ಕೇವಲ ಶುದ್ಧಾತ್ಮನು. ಶುದ್ಧಾತ್ಮನಲ್ಲಿ ಅಥವಾ ತನ್ನ ಶುದ್ಧ ಸ್ವರೂಪದಲ್ಲಿ ಲೀನನಾಗಿದ್ದರೂ ತನ್ನನ್ನೆ ಸಕಲ ಸುಖ ದಾತೃವೆಂದು ತಿಳಿಯುವುದು ಸುಖದ ಶಯ್ಯೆಯಾಗಿದೆ. ವಿಹರಿಸುವ ಪಾವನ ಸ್ಥಾನವಾಗಿದೆ. ಈ ಪ್ರಕಾರ ಯಾವ ಶುದ್ಧಾತ್ಮನ ಶುದ್ಧ ಸ್ವರೂಪದಲ್ಲಿ ಸರ್ವಥಾ ತನ್ಮಯನಾಗುವ ಭಾವನೆ ಯುಳ್ಳವನೇ ಶುದ್ಧೋಪಯೋಗಿಯು.

ಮುಂದಕ್ಕೆ ಶುದ್ಧೋಪಯೋಗಧಾರಕನು ಯಾವ ವಿಧ ವಚನಗಳನ್ನಾಡುವನೋ ಇಲ್ಲವೋ ಎಂಬುದನ್ನು ಸ್ಪಷ್ಟೀಕರಿಸುತ್ತಾರೆ.

ಪ್ರಶ್ನೆ :- ಕ್ವಚಿಚ್ಛುದ್ಧೋಪಯೋಗೀಹ ಬ್ರವೀತಿ ವಾ ನ ಮೇ ವದ !

ಅರ್ಥ :- ದಯವಿಟ್ಟು ಶುದ್ಧೋಪಯೋಗ ಧಾರಕನು ವಚನವನ್ನಾಡುವನೊ ಅಥವಾ ಇಲ್ಲವೊ ಎಂಬುದನ್ನು ವಿವರಿಸಬೇಕು.

ಉತ್ತರ :- ಪ್ರಾಯಶ್ಚಿದಾನಂದಮಯೀವಿರಾಗೀ ।
ಶುದ್ಧೋಪಯೋಗೀಭವತೀತಿಮೌನೀ ॥
ಶುದ್ಧಾತ್ಮಶಾಂತ್ಯೈಯದಿಚೇದ್ ಬ್ರವೀತಿ ।
ಹಿತಂ ಮಿತಂ ಶಾಂತಿಕರಂ ಪ್ರಿಯಂ ವಾ ॥೨೩೬॥

ದೃಗ್ಬೋಧ ಚಾರಿತ್ರಮಯೋ ಮಮಾತ್ಮಾ ।
ಸಾಧ್ಯಃ ಪ್ರಸಿದ್ಧೋ ವ್ಯವಹಾರತೋಽಸ್ತಿ ॥
ಚಿದ್ರೂಪಮೂರ್ತಿಃ ಪರಮಾರ್ಥತೋ ವಾ ।
ಹ್ಯಾದ್ಯಂತಮಧ್ಯಾದಿ ವಿವರ್ಜಿತೋಽಸ್ತಿ ॥೨೩೭॥

ಅರ್ಥ :- ಶುದ್ಧೋಪಯೋಗವನ್ನು ಧರಿಸಿರುವ, ವೀತರಾಗ ಅವಸ್ಥೆಯನ್ನು ಧಾರಣೆಮಾಡಿರುವ ಚಿದಾನಂದಸ್ವರೂಪ ಶುದ್ಧ ಆತ್ಮರುಗಳು ಪ್ರಾಯಃ ಮೌನಿಗಳೇ ಆಗಿರುತ್ತಾರೆ. ಒಂದುವೇಳೆ ಅವರು ತಮ್ಮ ಶುದ್ಧಾತ್ಮನಲ್ಲಿ ಪರಮ ವಿಶ್ರಾಂತಿಯನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ ಎಂದೂ ಯಾವ ವಿಧ ವಚನ ಹೇಳುವುದಿದ್ದರೆ ಹಿತಕರವು, ಪರಿಮಿತವು, ಅತ್ಯಂತ ಪ್ರಿಯಕರವು ಮತ್ತು ಪರಮ ಶಾಂತಿಯನ್ನುಂಟುಮಾಡುವ ವಚನಗಳನ್ನೇ ಆಡುತ್ತಾರೆ. ಹಾಗೆ ಈ ನನ್ನ ಆತ್ಮನು ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ಚಾರಿತ್ರಮಯನಾಗಿರುತ್ತಾನೆ. ವ್ಯವಹಾರ ದಿಂದ ಸಿದ್ಧನಾಗಲು ಯೋಗ್ಯನಾಗಿರುತ್ತಾನೆ. ಪರಮಾರ್ಥ ದೃಷ್ಟಿಯಿಂದ ಶುದ್ಧ ಚೈತನ್ಯಸ್ವರೂಪನಾಗಿರುತ್ತಾನೆ. ಆದಿ, ಮಧ್ಯ, ಅಂತ್ಯದಿಂದ ರಹಿತನಾಗಿಯೂ ಇರುತ್ತಾನೆ. ಈ ಪ್ರಕಾರ ತನ್ನ ಶುದ್ಧಾತ್ಮ ಸ್ವರೂಪವನ್ನು ನಿರೂಪಿಸಿರುತ್ತಾರೆ.

ಭಾವಾರ್ಥ :- ಈ ಶುದ್ಧಾತ್ಮನು ತನ್ನ ಶುದ್ಧಸ್ವರೂಪದಲ್ಲಿ ರಮಿಸುವಾಗ ಶುದ್ಧೋಪಯೋಗವು ಉಂಟಾಗುವುದು. ಆ ಸಮಯದಲ್ಲಿ ಯಾವ ವಿಧದ ಕ್ರಿಯೆಗಳಿರುವುದಿಲ್ಲವು. ಶಾರೀರಿಕಕ್ರಿಯೆಗಳಾಗಲಿ, ಮಾನಸಿಕ ಚಿಂತನೆಗಳಾಗಲಿ, ವಾಚನಿಕ ಕಾರ್ಯಗಳಾಗಲಿ ಇರುವುದಿಲ್ಲವು. ಸರ್ವಥಾ ಮೌನಿಯಾಗಿರುತ್ತಾರೆ. ಆದರೆ ಆ ಧ್ಯಾನಾನಂತರ ಒಂದುವೇಳೆ ಭವ್ಯಾತ್ಮರಿಗೆ ಏನಾದರು ಹೇಳುವುದಿದ್ದರೆ ಆತ್ಮಹಿತಕಾರಕ ವಚನಗಳನ್ನೇ ಹೇಳುವರು. ಯಾರಿಗೂ ಅಪ್ರಿಯವು, ನಿಂದನೀಯವು ಆದ ವಚನಗಳನ್ನೇ ಆಡರು. ಇದಲ್ಲದೆ ಶಾಂತಿ



ದಾಯಕ ಮಾತುಗಳಲ್ಲದೆ, ಕ್ರೋಧ, ಕಷಾಯ ಉಂಟಾಗುವ ಮಾತುಗಳು ಅವರ ಮುಖದಿಂದ ಬರುವುದಿಲ್ಲವು. ಉಪದೇಶವನ್ನೀಯುವ ಪ್ರಸಂಗವು ಸಂಭವಿಸುವಾಗ ನನ್ನಾತ್ಮನು ಅತ್ಯಂತ ಶುದ್ಧನೂ, ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ಚಾರಿತ್ರಮಯನೂ, ಶುದ್ಧಚೈತನ್ಯಸ್ವರೂಪನೂ ಮತ್ತು ಆದಿ, ಮಧ್ಯ, ಅಂತ್ಯರಹಿತನೂ ಆಗಿರುತ್ತಾನೆ. ಆದಾಗ್ಯೂ ಪರಮಾರ್ಥ ದೃಷ್ಟಿಯಿಂದ ಆತ್ಮ ಸ್ವರೂಪ ಹೀಗಿದ್ದರು, ಸಂಸಾರೀಜೀವಗಳು ತಮ್ಮ ವ್ಯವಹಾರ ಚಾರಿತ್ರವನ್ನು ಧಾರಣೆಮಾಡಿ ಶುದ್ಧೀಕರಿಸತಕ್ಕದ್ದು.

ಮುಂದಕ್ಕೆ ನಿಜವಾದ ವಿಜಯಶಾಲಿಯ ಸ್ವರೂಪವಿವರಣೆ.

ಪ್ರಶ್ನೆ :- ಸತ್ಯಾರ್ಥವಿಜಯೀ ಕಃ ಸ್ಯಾತ್ ವದ ಮೇ ಸಾಂಪ್ರತಂ ಪ್ರಭೋ !

ಅರ್ಥ :- ಹೇ ಭಗವಾನ್ ! ಸಂಸಾರದಲ್ಲಿ ಯಾವ ವಿದ್ವಾನ್ ಪುರುಷನು ನಿಜವಾದ ಜಯಶಾಲಿಯೆಂದು ಹೇಳಿಸಿಕೊಳ್ಳಲರ್ಹನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ವ್ಯಾಘ್ರಸ್ಯ ಸಿಂಹಸ್ಯ ವಶಂ ವಿಧಾತಾ ।
ಶತ್ರೋರ್ವಿಜೇತಾಕ್ಷ ಸುಖಾದಿಭೋಕ್ತಾ ॥
ಗಜಾಶ್ವ ಜಂತೋರ್ಮಣಿರತ್ನ ಪೃಥ್ವ್ಯಾಃ ।
ಪರೀಕ್ಷಕಃ ಶೋಧಕಃ ವಿವಸುಜ್ಞಃ ॥೨೩೮॥

ದೃಷ್ಟಾ ಅನೇಕಭುವಿಕಿಂತುನೈವ ।
ಕರ್ಮಾರಿಜೇತಾತ್ಮಸುಖಸ್ಯಭೋಕ್ತಾ ॥
ಶುದ್ಧಾತ್ಮರೂಪಸ್ಯ ಪರೀಕ್ಷಕಶ್ಚ ।
ಶುದ್ಧೋಪಯೋಗೀವಿರಲಃ ಕೃತಾರ್ಥೀ ॥೨೩೯॥

ಅರ್ಥ :- ಈ ಜಗತ್ತಿನಲ್ಲಿ ಸಿಂಹ, ಹುಲಿ, ಮೊದಲಾದ ಹಿಂಸಕ ಪಶುಗಳನ್ನು ವಶಪಡಿಸಿಕೊಳ್ಳುವವರು ಅನೇಕ ಜನರಿರುತ್ತಾರೆ. ತನ್ನ ಪ್ರಬಲ ಶತ್ರುಗಳನ್ನು ಜಯಿಸುವವರು ಅನೇಕರಿರುತ್ತಾರೆ. ಉತ್ತಮ ಇಂದ್ರಿಯ ಸುಖವನ್ನು ಭೋಗಿಸುವವರು ಬಹುಜನರಿರುತ್ತಾರೆ. ಆನೆ, ಕುದುರೆ ಮೊದಲಾದ ಮೃಗಗಳ ಪರೀಕ್ಷಕರು, ರತ್ನಮಣೀ ಪರೀಕ್ಷಕರು. ಭೂಮಿ ಮತ್ತು ಜಲ

ಪರಿಶೋಧಕರಾದ ವಿದ್ವನ್ಮಣಿಗಳು ಬಹುಜನರಿರುತ್ತಾರೆ. ಆದರೆ ಕರ್ಮಗಳನ್ನು ಜಯಿಸುವವರು, ಆತ್ಮಸುಖ ಭೋಗಿಗಳು, ತನ್ನ ಪರಿಶುದ್ಧಸ್ವರೂಪದ ಪರೀಕ್ಷಕರು, ಕೃತಕೃತ್ಯರು ಮತ್ತು ಶುದ್ಧೋಪಯೋಗವನ್ನು ಧಾರಣೆಮಾಡುವವರ ಸಂಖ್ಯೆಯು ಮಾತ್ರ ಅತ್ಯಲ್ಪವು. ಅಂತಹ ಜೀವಗಳು ಇಲ್ಲವೆಂದೇ ಹೇಳಿದರೆ ತಪ್ಪಾಗಲಾರದು.

ಭಾವಾರ್ಥ :- ತಮಗೆ ಶಾರೀರಿಕ, ಮಾನಸಿಕ, ದುಃಖ, ಉಪದ್ರವವನ್ನುಂಟುಮಾಡುವವರು ಶತ್ರುಗಳೆಂದು ಪರಿಗಣಿಸಲ್ಪಡುವರು. ಅವರನ್ನು ಜಯಿಸುವವರನ್ನು ವಿಜಯಿಗಳೆಂದು ಹೇಳುತ್ತಾರೆ. ಧನವನ್ನು ಅಪಹರಿಸುವನನ್ನು, ಕುಟುಂಬದವರನ್ನು ವಧಿಸುವವರನ್ನು ಶತ್ರುವೆಂದು ತಿಳಿಯುತ್ತಾರೆ. ಆದರೆ ಯಥಾರ್ಥವಾಗಿಯು ವಿಚಾರಿಸುವಾಗ ನಿಜವಾಗಿಯು ಅವರು ಶತ್ರುವಲ್ಲ. ಏಕೆಂದರೆ ಈ ಸಂಸಾರದಲ್ಲಿ ಉದ್ಭವಿಸುವ ಸುಖದುಃಖಗಳೆಲ್ಲವು ಅವರವರ ಕರ್ಮಗಳ ಉದಯದಿಂದಲೇ ಉಂಟಾಗುವವು. ಒಂದವೇಳೆ ಅಶುಭ ಕರ್ಮಗಳ ಉದಯವಿಲ್ಲದಿದ್ದರೆ ಯಾರು ಯಾರ ಧನವನ್ನು ಅಪಹರಿಸಲಾರರು. ಯಾರೂ ಯಾರನ್ನು ವಧಿಸಲಾರರು. ತದ್ವಿರುದ್ಧವಾಗಿ ಅಶುಭಕರ್ಮವು ಉದಯಕ್ಕೆ ಬರುವಾಗ ಮನುಷ್ಯರು, ಪಶುಪಕ್ಷಿಗಳು ತನ್ನನ್ನು ಅಥವಾ ಕುಟುಂಬದವರನ್ನು ವಧಿಸಬಹುದು. ಇದರಲ್ಲಿ ಯಾವುದಾದರೊಂದು ನಿಮಿತ್ತ ಕಾರಣವು ಒದಗಿ ಬರಬಹುದು. ಆ ಕರ್ಮ ಉದಯವು ಅಂತಹ ನಿಮಿತ್ತವನ್ನೇ ತಂದೊಡ್ಡುವುದು. ಕೊಲ್ಲುವವನು ತನ್ನ ಕರ್ಮರೂಪಶತ್ರುವು. ಆದ್ದರಿಂದ ಯಾವ ಪುರುಷನು ತನ್ನ ಪ್ರಬಲಶತ್ರುವಾದ ಕರ್ಮರೂಪಿ ಶತ್ರುವನ್ನು ಜಯಿಸುವವನು ಯಥಾರ್ಥ ವಿಜಯಿಯೆಂದು ಹೇಳಿಸಿಕೊಳ್ಳುವನು. ಯಾವ ಪ್ರಕಾರವಾಗಿ ಶತ್ರುವನ್ನು ಜಯಿಸುವವನು ನಾನಾವಿಧ ಸುಖಸಾಮಗ್ರಿಗಳನ್ನು ಪಡೆದು ಸುಖವನ್ನನುಭವಿಸುವಂತೆ ಕರ್ಮರೂಪಿ ಶತ್ರುವನ್ನು ಜಯಿಸಿರುವ ಪುರುಷನು ಕೂಡಾ ಅನಂತಚತುಷ್ಟಯರೂಪ ವಿಭೂತಿಗಳನ್ನು ಪ್ರಾಪ್ತಮಾಡಿಕೊಂಡು ಆತ್ಮಜನ್ಯ ಅನಂತಸುಖವನ್ನು ಅನುಭವಿಸುವನು. ಮತ್ತೆ ಶುದ್ಧೋಪಯೋಗವನ್ನು ಧರಿಸಿರುವವನು ಕೃತಕೃತ್ಯನೆಂದೂ ಹೇಳಿಸಿಕೊಳ್ಳುವನು. ಆದರೆ ಈ ರೀತಿಯಾಗಿ ನಿಜವಾದ ಕರ್ಮರೂಪಿ ಶತ್ರುವನ್ನು ಜಯಿಸುವ ಧೀರನು



ಸಂಸಾರ ಬಂಧನಕ್ಕೆ ಸಿಲುಕಲಾರನು. ಸಿಲುಕುವುದು ಬಹು ವಿರಳವು. ಈ ವಿಚಾರವನ್ನು ಚಿಂತಿಸುತ್ತ ಭವ್ಯಜೀವಗಳು ತಮ್ಮ ಯಥಾರ್ಥ ಶತ್ರು ಯಾರೆಂದು ವಿಚಾರಿಸಿ ತಿಳಿದು ಅಂತಹ ಕರ್ಮರೂಪ ಶತ್ರುವಿನ ವಿಜಯಕ್ಕಾಗಿ ಪ್ರಯತ್ನಿಸತಕ್ಕದ್ದು. ಮೊತ್ತಮೊದಲು ಮೋಹನೀಯ ಕರ್ಮವನ್ನು ನಾಶಮಾಡಿ ಶುದ್ಧೋಪಯೋಗ ಧಾರಣೆಯ ಕಾಲದಲ್ಲಿ ಪ್ರಯತ್ನಶೀಲನಾಗಿರಬೇಕು. ಆದರಿಂದ ಶ್ರೀಘ್ರವೇ ಮೋಕ್ಷಲಕ್ಷ್ಮಿಯು ಕೈವಶವಾಗುವುದು.

ಮುಂದಕ್ಕೆ ಆತ್ಮನ ಆಧಾರ ಆಧೇಯ ಭಾವಗಳ ವಿವರಣೆ.

ಪ್ರಶ್ನೆ :- ಆಧಾರಃ ಕಶ್ಚ ಲೋಕೇಽಸ್ಮಿನ್ ಸ್ವಾತ್ಮನೋ ಮೇ ಗುರೋ ವದ ।

ಅರ್ಥ :- ಹೇ ಭಗವಾನ್ ! ದಯವಿಟ್ಟು ಸಂಸಾರದಲ್ಲಿ ನನ್ನ ಆತ್ಮನ ಆಧಾರಭೂತವಾದುದು ಯಾವುದೆಂದು ವಿವರಿಸಬೇಕು.

ಉತ್ತರ :- ಅನಾದಿಕರ್ಮಸಂಬಂಧಾದಾಧಾರಃ ಸ್ವಾತ್ಮನೋ ವಪುಃ ।
ಅಥವಾ ಪೃಥಿವೀಜ್ಞೇಯಾ ಕ್ವಚಿದ್ ಬಂಧುಜನಾದಿಕಃ ॥೨೪೦॥

ಯಾಥಾತ್ಮ್ಯಾತ್ಸ್ವಾತ್ಮನಃ ಸ್ವಾತ್ಮಾಧಾರೋ ಜ್ಞೇಯೋ ನಿರಂಜನಃ ।
ಆಧೇಯೋಽಪಿ ಸ ಏವ ಸ್ಯಾತ್ ಯೋಗೀ ಜಾನಾತಿ ಶುದ್ಧಧೀಃ ॥

ಅರ್ಥ :- ಸಂಸಾರೀಜೀವಗಳು ಅನಾದಿಕಾಲದಿಂದ ಕರ್ಮಗಳ ಸುಳಿಯಲ್ಲಿ ಸಿಲುಕಿಕೊಂಡು ಭ್ರಮಿಸುತ್ತಿರುವವು. ಆ ಕರ್ಮಸಂಬಂಧವನ್ನು ವಿಚಾರಿಸುವಾಗ ಸಂಸಾರೀಜೀವಗಳಿಗೆ ಶರೀರವೇ ಆಧಾರವಾಗಿರುತ್ತದೆ. ಆ ಶರೀರ ವಿಶಿಷ್ಟ ಆತ್ಮನ ಆಧಾರವು ಭೂಮಿಯೇ ಆಗಿರುತ್ತದೆ. ಶರೀರ ವಿಶಿಷ್ಟ ಆತ್ಮನ ಪಾಲನೆ, ಪೋಷಣೆಯ ದೃಷ್ಟಿಯಿಂದ ವಿಚಾರಿಸುವಾಗ ಕೆಲವು ಕಡೆಗಳಲ್ಲಿ ಸಹೋದರರು, ಬಂಧುಗಳು ಇವನಿಗೆ ಆಧಾರರೂಪರಾಗಿರುತ್ತಾರೆ. ಆದರೂ ಯಥಾರ್ಥದೃಷ್ಟಿಯಿಂದ ವಿಚಾರಿಸುವಾಗ ಕರ್ಮಬಂಧನರಹಿತ ಈ ತನ್ನ ಶುದ್ಧಾತ್ಮನಿಗೆ ತನ್ನ ಶುದ್ಧಾತ್ಮನೇ ಆಧಾರನಾಗಿರುತ್ತಾನೆ. ಹಾಗೆ ಆಧೇಯವಾಗಿರುತ್ತಾನೆ. ಈ ಆಧಾರ ಆಧೇಯ ಭಾವವನ್ನು ಚಿಂತಿಸಲು ಶುದ್ಧಬುದ್ಧಿಯುಳ್ಳ ಯೋಗಿವರ್ಯರಿಗೇ ಸಾಧ್ಯವು.

ಭಾವಾರ್ಥ :- ಈ ಆತ್ಮನು ಪರಮಾರ್ಥದೃಷ್ಟಿಯಿಂದ ಕರ್ಮಗಳಿಂದ ಸರ್ವಥಾ ರಹಿತ ಶುದ್ಧನಾಗಿರುತ್ತಾನೆ. ಆದರೆ ಅನಾದಿ ಕಾಲದಿಂದ ಕರ್ಮ ಬಂಧನದಲ್ಲಿ ಬಂಧಿಸಲ್ಪಟ್ಟಿರುತ್ತಾನೆ. ಕರ್ಮಬಂಧನದಲ್ಲಿ ಸಿಲುಕಿರುವುದರಿಂದಲೇ ನಾನಾ ಶರೀರವನ್ನು ಧಾರಣೆಮಾಡಿಕೊಂಡಿರುತ್ತಾನೆ. ಈ ದೃಷ್ಟಿಯಿಂದ ಆತ್ಮನ ಆಧಾರವು ಶರೀರವೇ ಆಗಿರುತ್ತದೆ. ಯಾಕೆಂದರೆ ಆತ್ಮನು ಶರೀರದಲ್ಲಿರುತ್ತಾನೆ. ಆದರೆ ಶರೀರವು ಮೂರ್ತವಾಗಿರುವುದರಿಂದ ನಿರಾಧಾರವಾಗಿರಲಾರದು. ಅತಃ ಆ ಆತ್ಮವಿಶಿಷ್ಟ ಶರೀರವು ಭೂಮಿಯಲ್ಲಿಯೂ ಅಥವಾ ಲೋಕಾಕಾಶದ ಯಾವುದಾದರೊಂದು ಸ್ಥಾನದಲ್ಲಿರುವುದರಿಂದಲೇ ಈ ಜೀವಕ್ಕೆ ಭೂಮಿಯೇ ಆಧಾರವೆಂದು ತಿಳಿಯುತ್ತ ಬಾಲಕ ಅವಸ್ಥೆಯಲ್ಲಾಗಲಿ, ಸಹೋದರ ಬಂಧುಗಳು, ಮಾತಾಪಿತೃಗಳನ್ನು ಆಧಾರ ರೂಪರೆಂದು ಒಪ್ಪಿಕೊಳ್ಳಬೇಕು. ಈ ಎಲ್ಲ ಆಧಾರಗಳು ಕರ್ಮಸಹಿತ, ಶರೀರ ಸಹಿತ ಜೀವಗಳಾಗಿರುತ್ತವೆ. ನಿಶ್ಚಯ ದೃಷ್ಟಿಯಿಂದ ವಿಚಾರಿಸುವಾಗ ಶರೀರ ಮತ್ತು ಕರ್ಮ ಇವೆರಡು ಪೌದ್ಗಲಿಕವೂ, ಜಡಸ್ವರೂಪವೂ ಆಗಿವೆ. ಆತ್ಮನಾದರೋ ಜ್ಞಾನದರ್ಶನ ಸ್ವರೂಪ ಚೈತನ್ಯಮಯನಾಗಿರುತ್ತಾನೆ. ಕರ್ಮವು ಮೂರ್ತವೂ, ಆತ್ಮಾ ಅಮೂರ್ತನು. ಆದ್ದರಿಂದ ಈ ಆತ್ಮನು ಶರೀರದಿಂದಲೂ, ಕರ್ಮಗಳಿಂದಲೂ ಸರ್ವಥಾ ಭಿನ್ನನಾಗಿರುತ್ತಾನೆ. ಅಮೂರ್ತನಾದ ಆತ್ಮನು ತನ್ನ ಪ್ರದೇಶಗಳಲ್ಲಿಯೂ, ತನ್ನ ಸ್ವರೂಪದಲ್ಲಿಯೂ ಇರುತ್ತಾನೆ. ಶುದ್ಧಾತ್ಮಸ್ವರೂಪ ಆತ್ಮನ ಆಧಾರವು ತನ್ನ ಶುದ್ಧಾತ್ಮನೇ, ಅವನೇ ಆಧೇಯವೂ ಕೂಡಾ ಆಗಿರುತ್ತಾನೆ. ಈ ಆಧಾರ ಆಧೇಯ ಭಾವವು ಕೇವಲ ಶುದ್ಧೋಪಯೋಗಿಗಳಾದ ಯೋಗೀಶ್ವರರಿಗೆ ಮಾತ್ರ ಗೋಚರವು. ಆಧಾರ ಆಧೇಯ ಭಾವಗಳು ಸಂಸಾರಿಗಳಿಗೆ ತಿಳಿಯಲು ಅಸಾಧ್ಯವು. ಇವರು ವ್ಯವಹಾರ ದೃಷ್ಟಿಯಲ್ಲಿ ಮುಳುಗಿರುತ್ತಿರುವುದರಿಂದ ಪೃಥ್ವಿ, ಮಾತಾಪಿತ್ರಾದಿಗಳ ಆಧಾರವೆಂದೇ ತಿಳಿಯುತ್ತಾರೆ. ಶುದ್ಧಾತ್ಮನ ಆಧಾರ ಆಧೇಯವನ್ನು ಶುದ್ಧಾತ್ಮ ಧಾರಣೆಮಾಡಿರುವ ಯೋಗಿಗಳಿಂದಲೇ ತಿಳಿಯಲು ಸಾಧ್ಯವು.

ಮುಂದಕ್ಕೆ ವಿಶ್ವಧರ್ಮದ ನಿರೂಪಣೆ.

ಪ್ರಶ್ನೆ :- ಶುದ್ಧೋಪಯೋಗ ಸಿದ್ಧ್ಯರ್ಥಂ ವಿಶ್ವಧರ್ಮೋ ವಿವೇಚ್ಯತೆ ।



ಅರ್ಥ :- ಶುದ್ಧೋಪಯೋಗದ ಸಿದ್ಧಿಗಾಗಿ ಸದ್ಗುರುವು ಸ್ವಯಂ ವಿಶ್ವಧರ್ಮದ ವಿವರಣೆಗೈಯುವರು.

ಧನಸ್ಯಬುದ್ಧೇಃ ಸಮಯಸ್ಯಶಕ್ತೇಃ ।
ನಿಯೋಜನಂ ಪ್ರಾಣಿಹಿತೇ ಸದೈವ ॥
ಸ್ಯಾದ್ವಿಶ್ವಧರ್ಮಃ ಸುಖದೋಽಸುಶಾಂತ್ಯೈ ।
ಜ್ಞಾತ್ವೇತಿ ಪೂರ್ವೋಕ್ತವಿಧಿರ್ವಿಧೇಯಃ ॥೨೪೨॥

ಯತಸ್ತ್ರೀಲೋಕೇ ಸ್ವರಸಸ್ಯಪಾನಂ ।
ಸ್ಯಾಚ್ಛುದ್ಧಚಿದ್ರೂಪಸುಖಸ್ಯ ಚರ್ಚಾ ॥
ಆಚಂದ್ರತಾರಾರ್ಕ ಮಿತೀಹಕೀರ್ತಿ -
ರ್ಗೃಹೇಗೃಹೇ ಮಂಗಲಗೀತವಾದ್ಯಂ ॥೨೪೩॥

ಅರ್ಥ :- ಪ್ರತಿಯೊಬ್ಬ ಭವ್ಯಜೀವಗಳು ಸದಾಕಾಲವು ಸರ್ವಪ್ರಾಣಿಗಳ ಹಿತಕ್ಕೋಸ್ಕರ ತಮ್ಮ ಧನವನ್ನು, ಬುದ್ಧಿಯನ್ನು, ಸಮಯವನ್ನು, ಶಕ್ತಿಯನ್ನು ಉಪಯೋಗಿಸುತ್ತಿರಬೇಕು. ಇದೇ ಸಮಸ್ತ ಸಂಸಾರದ ಹಿತವನ್ನುಂಟು ಮಾಡುವ ವಿಶ್ವಧರ್ಮವಾಗಿರುತ್ತದೆ. ಸರ್ವ ಜೀವಗಳಿಗೆ ಸುಖವನ್ನುಂಟು ಮಾಡುವ ಚಿಂತಾಮಣಿರತ್ನವಾಗಿರುತ್ತದೆ. ಸಕಲವಿಧ ಶಾಂತಿ, ಸಮಾಧಾನ ಪನ್ನೀಯುವ ವಿಶ್ವಧರ್ಮವನ್ನು ಪಾಲಿಸತಕ್ಕದ್ದು. ಇದರ ಪಾಲನೆಯಿಂದ ಆತ್ಮೀಯಸುಖವೂ, ಚಿದಾನಂದ ಸುಖದ ಪ್ರಾಪ್ತಿಯೂ, ಸೂರ್ಯಚಂದ್ರರಿರುವರೆಗೂ ಸತ್ಕೀರ್ತಿಯೂ ಉಂಟಾಗುವುವು.

ಭಾವಾರ್ಥ :- ಸರ್ವಜೀವಗಳಿಗೆ ಕಲ್ಯಾಣವನ್ನುಂಟುಮಾಡಬೇಕೆಂಬ ಭಾವನೆಯು ಸರ್ವೋತ್ಕೃಷ್ಟವಾಗಿರುತ್ತದೆ. ಈ ಭಾವನೆಯು ಆತ್ಮಕಲ್ಯಾಣ ಭಾವನೆಯಾಗಿರಬೇಕು. ಕೇವಲ ಲೌಕಿಕ ಉಪಕಾರ ವನ್ನೆಸಗುವ ಭಾವನೆಯು ಉತ್ಕೃಷ್ಟಭಾವನೆಯೆಂದು ಪರಿಗಣಿಸಲ್ಪಡುವುದಿಲ್ಲವು. ಸಂಸಾರದಲ್ಲಿ ಕೆಲವು ಜೀವಗಳು ಪರರಿಗೆ ಉಪಕಾರ ಕಾರ್ಯಗಳನ್ನು ಮಾಡುತ್ತಿದ್ದರೂ ಅವು ತಮ್ಮ ಆತ್ಮ ಕಲ್ಯಾಣವನ್ನು ಮಾಡಿಕೊಳ್ಳುವುದಿಲ್ಲವು. ಮತ್ತೆ ಅನ್ಯ ಆತ್ಮರುಗಳ ಆತ್ಮಕಲ್ಯಾಣ ಮಾಡುವುದೂ ಇಲ್ಲವು. ಕೇವಲ ಜನಗಳಿಗೆ ತೋರಿಸುವುದಕ್ಕಾಗಿಯೇ ಉಪಕಾರವನ್ನು ಮಾಡಿಕೊಂಡಿರುತ್ತೇವೆಯೋ, ಅಷ್ಟರವರೆಗೆ ತಮ್ಮ ಧರ್ಮ-ಕರ್ಮಗಳನ್ನು ಕೂಡಾ ಬಿಟ್ಟುಬಿಡುತ್ತವೆಂದು ಸಿದ್ಧ

ವಾಗುತ್ತದೆ. ಪರೋಪಕಾರವನ್ನು ಮಾಡುವ ಅನೇಕ ಮಹಾವೀರರ ಅನುಯಾಯಿಗಳು ರಾತ್ರಿ ಭೋಜನ, ನೀರನ್ನು ಶೋಧಿಸದೆ ಉಪಯೋಗಿಸುವ ಮತ್ತು ದೇವರ ದರ್ಶನ ಮಾಡದವರಿರುತ್ತಾರೆ. ಅವರಿಗೇನಾದರು ಬುದ್ಧಿವಾದಗಳನ್ನು ಹೇಳಿದರೆ ಅದಕ್ಕೆಲ್ಲ ಸಮಯವೇ ಸಿಕ್ಕುವುದಿಲ್ಲವೆಂದೂ ಉತ್ತರ ಬರುವುದು. ಅಂಥವರ ಪರೋಪಕಾರಕ ಕಾರ್ಯಗಳು ಆತ್ಮಕಲ್ಯಾಣಕ್ಕೆ ಕಾರಣಗಳಾಗಲಾರವು. ಈ ಅಲ್ಪ ಲೌಕಿಕ ಪರೋಪಕಾರಗಳಿಂದ ಅನ್ಯಜೀವಗಳ ಕಲ್ಯಾಣವಾಗಲಿ, ತನ್ನ ಆತ್ಮಕಲ್ಯಾಣವಾಗಲಿ ಆಗುವುದಿಲ್ಲವು. ಮೊತ್ತಮೊದಲು ತನ್ನ ಆತ್ಮ ಕಲ್ಯಾಣವನ್ನು ಮಾಡಿಕೊಂಡು ತನ್ನ ಕ್ರೋಧ, ಮಾನ, ಮಾಯ, ಲೋಭ, ಮದ, ಮಾತ್ಸರ್ಯ, ಕಾಮವಿಕಾರಗಳೇ ಮೊದಲಾದ ಸಕಲ ವಿಕಾರ ಭಾವಗಳನ್ನು ದೂರಮಾಡಿಕೊಂಡು ತನ್ನ ಆತ್ಮನನ್ನು ಶುದ್ಧಿಗೊಳಿಸಿಕೊಳ್ಳುವವನಿಗೇ ಅನ್ಯ ಜೀವಗಳ ಕಲ್ಯಾಣವನ್ನು ಮಾಡಲು ಸಾಧ್ಯವಾಗುವುದು. ವಿಕಾರವಿಲ್ಲದ ಆತ್ಮರುಗಳಿಂದ ಸ್ವಯಂ ಅನ್ಯಜೀವಿಗಳ ಕಲ್ಯಾಣವು ಅವಶ್ಯವಾಗುವುದು. ಉದಾ :- ನಿರ್ವಿಕಾರ ಮುದ್ರಾಧಾರಕರಾದ ಮುನಿಶ್ರೇಷ್ಠರನ್ನು ಕಂಡು ಕ್ರೂರ ಸ್ವಭಾವವುಳ್ಳ ಸಿಂಹ, ಹುಲಿ, ಸರ್ಪ, ಮೊದಲಾದ ಮೃಗಗಳು ಕೂಡಾ ಶಾಂತವಾಗುತ್ತವೆ. ಮಾತ್ರವಲ್ಲ ; ಅವು ಸ್ವಯಂ ನಿರ್ವಿಕಾರ ಸ್ವಭಾವವುಳ್ಳವುಗಳಾಗಿ ಮುನಿಶ್ರೇಷ್ಠರ ಸಮ್ಮುಖದಲ್ಲಿಯೇ ಶಾಂತಿಯಿಂದ ಕುಳಿತುಕೊಳ್ಳುತ್ತವೆ. ಅರ್ಥಾತ್ ಆತ್ಮಕಲ್ಯಾಣವು ವಿಕಾರಭಾವಗಳ ತ್ಯಾಗದಿಂದಲೇ ಸಾಧ್ಯವೆಂದು ಸಿದ್ಧವಾಗುವುದು. ಆದ್ದರಿಂದ ಆ ವಿಕಾರಗಳ ತ್ಯಾಗಗೈಯುವುದಕ್ಕಾಗಿಯೂ ಇನ್ನಿತರರಿಂದ ಮಾಡಿಸುವುದಕ್ಕಾಗಿಯೂ ತನ್ನ ಬುದ್ಧಿಜ್ಞಾನವನ್ನು ಉಪಯೋಗಿಸತಕ್ಕದ್ದು. ಈ ಕಾರ್ಯಕ್ಕಾಗಿ ತನ್ನ ಸರ್ವಸ್ವವನ್ನೇ ಮೀಸಲಾಗಿಡಬೇಕು. ವಿಕಾರಗಳ ತ್ಯಾಗದಿಂದ ಸರ್ವೋತ್ಕೃಷ್ಟವಾದ ಆತ್ಮಕಲ್ಯಾಣವಾಗಿರುತ್ತದೆ. ಅನೇಕ ಜೀವಗಳು ಮೋಕ್ಷಮಾರ್ಗದಲ್ಲಿ ಉದ್ಯುಕ್ತರಾಗುತ್ತಾರೆ. ತೀರ್ಥಂಕರ ಪರಮದೇವರು ಸಿದ್ಧರನ್ನೇ ಸ್ಮರಿಸುತ್ತ ದೀಕ್ಷಿತರಾಗುತ್ತಾರೆ. ಇದೇ ಪರಮೋತ್ಕೃಷ್ಟ ಪರೋಪಕಾರವೆಂದು ಹೇಳಿಸಿಕೊಳ್ಳುವುದು. ಇದಕ್ಕೇನೆ ವಿಶ್ವಧರ್ಮವೆಂದು ಹೇಳುತ್ತಾರೆ.

ಮುಂದಕ್ಕೆ ಶುದ್ಧೋಪಯೋಗದ ಸಿದ್ಧಿಗಾಗಿ ಧ್ಯಾನಫಲ ವರ್ಣನೆ.

ಶುದ್ಧೋಪಯೋಗ ಸಿದ್ಧ್ಯರ್ಥಂ ಫಲಂ ಧ್ಯಾನಸ್ಯ ಕಥ್ಯತೇ ॥



ಅರ್ಥ :- ಶುದ್ಧೋಪಯೋಗ ಸಿದ್ಧಿಗಾಗಿ ಸರ್ವೋತ್ಕೃಷ್ಟ ಧ್ಯಾನಫಲವನ್ನು ವಿವರಿಸುತ್ತಾರೆ.

ಏಕಾಗ್ರಚಿಂತಾಪ್ರವಿರೋಧನಾಮ ।
ಧ್ಯಾನಂ ಚ ಶುಕ್ಲಂ ಸುಖಶಾಂತಿಮೂಲಂ ॥
ಕುರ್ವನ್ ಪ್ರವೇಶಂ ಹ್ಯಚಲೇ ಸ್ವಧರ್ಮೇ ।
ಮಿಷ್ಟಾತಿಮಿಷ್ಟಂ ಸ್ವರಸಂ ಪಿಬನ್ ಹಿ ॥೨೪೪॥

ಶುದ್ಧೋಪಯೋಗೇ ಸಹಜೇನಸಾಧುಃ ।
ಪ್ರಾಪ್ನೋತಿ ಶುದ್ಧಾಂ ನಿಜರಾಜಧಾನೀಂ ॥
ಸ್ವಾನಂದ ತುಷ್ಟೇನ ಸುಖಪ್ರದೇನ ।
ಶ್ರೀ ಕುಂಥುನಾಮ್ನಾವರಸೂರಿಣೋಕ್ತಂ ॥೨೪೫॥

ಅರ್ಥ :- ಸಕಲ ಚಿಂತೆಗಳನ್ನು ತಡೆದು ಕೇವಲ ತನ್ನ ಶುದ್ಧಾತ್ಮನಲ್ಲಿ ಲೀನನಾಗಿ ಆ ವಸ್ತುವನ್ನೇ ಚಿಂತಿಸುವುದು ಶುಕ್ಲಧ್ಯಾನವಾಗಿರುತ್ತದೆ. ಆ ಶುಕ್ಲಧ್ಯಾನವು ಅನಂತ ಸುಖಶಾಂತಿಗೆ ಪ್ರಧಾನಕಾರಣವಾಗಿರುತ್ತದೆ. ಯಾವ ಧ್ಯಾನೀಮಹಾತ್ಮನು ತನ್ನ ನಿಶ್ಚಲ ಆತ್ಮಧರ್ಮದಲ್ಲಿ ತನ್ಮಯನಾದವನು ಆತ್ಮಜನ್ಯ ಮಧುರ ಸುಖಾಮೃತವನ್ನು ಪಾನಮಾಡಿಕೊಂಡಿರುತ್ತಾನೆ. ಅನಂತರ ಶುದ್ಧೋಪಯೋಗವನ್ನು ಧರಿಸಿರುವ ಸಾಧುವು ಮಹಾಶುದ್ಧವಾದ ಮೋಕ್ಷರೂಪಿ ರಾಜಧಾನಿಯನ್ನು ಪ್ರವೇಶಿಸುವನು. ಹೀಗೆ ತನ್ನಾತ್ಮಜನ್ಯ ಸುಖದಲ್ಲಿ ತನ್ಮಯನಾಗಿರುವ ಮತ್ತು ಸರ್ವ ಜೀವಗಳಿಗೆ ಸುಖವನ್ನೀಡುವ ಆಚಾರ್ಯವರ್ಯ ಶ್ರೀ ಕುಂಥುಸಾಗರ ಮಹಾಯೋಗಿಗಳು ವಿವರ್ಣಿಸಿರುತ್ತಾರೆ.

ಭಾವಾರ್ಥ :- ಸಂಸಾರ ಸಂಬಂಧ ಸಕಲ ಚಿಂತನೆಗಳನ್ನು ಬಿಟ್ಟು ಯಾವುದಾದರೊಂದು ವಸ್ತುವಿನ ಚಿಂತನೆಗೈಯುವುದೇ ಧ್ಯಾನವು. ಅದರಲ್ಲಿ ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳೆಂಬ ನಾಲ್ಕು ಭೇದಗಳಿವೆ. ದುಃಖಪೂರಿತ ಮನಸ್ಸಿನಿಂದಮಾಡುವ ಧ್ಯಾನವು ಆರ್ತಧ್ಯಾನವು. ಅದು ತಿರ್ಯಂಚಗತಿಗೆ ಕಾರಣವಾಗಿರುತ್ತದೆ. ರೌದ್ರಪರಿಣಾಮದಿಂದ ಅಥವಾ ಹಿಂಸೆ, ಸುಳ್ಳು, ಕಳ್ಳತನರೂಪ ಕ್ರೂರ ಪರಿಣಾಮಗಳಿಂದಯುಕ್ತ ಧ್ಯಾನವು

ರೌದ್ರಧ್ಯಾನವಾಗಿರುತ್ತದೆ. ಇದು ನರಕಕ್ಕೆ ಕಾರಣವಾಗಿರುತ್ತದೆ. ಧರ್ಮ ಚಿಂತನಾಯುಕ್ತ ಧ್ಯಾನವು ಧರ್ಮಧ್ಯಾನವೆಂದೆನ್ನಿಸಿಕೊಳ್ಳುವುದು. ಇದು ಮನುಷ್ಯ ಮತ್ತು ದೇವಗತಿಗೆ ಕಾರಣವಾಗಿರುತ್ತದೆ. ಶುದ್ಧಾತ್ಮ ಚಿಂತನೆಗೆ ಶುಕ್ಲ ಧ್ಯಾನವೆಂದು ಹೇಳುತ್ತಾರೆ. ಇದು ಸಾಕ್ಷಾತ್ ಮೋಕ್ಷಕ್ಕೆ ಕಾರಣವಾಗಿರುತ್ತದೆ. ಇದರ ಬಲದಿಂದಲೇ ಆತ್ಮನ ಗುಣಗಳನ್ನು ಘಾತಿಸುವ ಘಾತಿ ಕರ್ಮಗಳು ನಾಶವಾಗಿ ಅನಂತ ಜ್ಞಾನಾದಿ ಅನಂತ ಚತುಷ್ಟಯಗಳು ಪ್ರಾಪ್ತವಾಗುತ್ತವೆ. ಆಮೇಲೆ ಅದೇ ಧ್ಯಾನದ ಬಲದ ಪ್ರಭಾವದಿಂದ ಅಘಾತಿಕರ್ಮಗಳನ್ನು ನಷ್ಟಗೊಳಿಸುತ್ತಾನೆ. ಶಾಶ್ವತ ಮೋಕ್ಷರೂಪ ರಾಜಧಾನಿಯಲ್ಲಿ ವಿರಾಜಿಸುತ್ತಾನೆ. ಅನಂತಕಾಲದವರೆವಿಗೂ ಅನಂತ ಸುಖವನ್ನು ಅನುಭವಿಸಿಕೊಂಡಿರುತ್ತಾನೆ. ಮೋಕ್ಷದಲ್ಲಿ ಯಾವ ಕಾಲದಲ್ಲಿಯೂ, ಯಾವ ವಿಧದ ವಿಕಾರವು ಉದ್ಭವಿಸ ಲಾರದು. ಈ ವಿಷಯವನ್ನು ತಿಳಿದುಕೊಂಡು ಭವ್ಯ ಜೀವಗಳು ಆರ್ತಧ್ಯಾನ ಮತ್ತು ರೌದ್ರಧ್ಯಾನಗಳನ್ನು ಪೂರ್ಣರೀತ್ಯಾಬಿಟ್ಟು ಧರ್ಮಧ್ಯಾನದಲ್ಲಿದ್ದು ಕ್ರಮೇಣ ಶುಕ್ಲಧ್ಯಾನದ ಅಭ್ಯಾಸದಲ್ಲಿರಬೇಕು. ಇದು ಅನಂತಸುಖಕ್ಕೆ ಕಾರಣೀ ಭೂತವಾಗಿರುತ್ತದೆ.

ಮುಂದಕ್ಕೆ ಅಶುಭೋಪಯೋಗ, ಶುಭೋಪಯೋಗ ಮತ್ತು ಶುದ್ಧೋಪಯೋಗ ಈ ಮೂರರ ಫಲವನ್ನು ಸಂಕ್ಷೇಪವಾಗಿ ವರ್ಣಿಸುತ್ತಾರೆ.

ಸಂಕ್ಷೇಪತೋ ವರ್ಣ್ಯತ ಏವ ಚಾಥ ।
ಭಾವತ್ರಯಾಣಾಂ ಚ ಫಲಸ್ವರೂಪಂ ॥

ಅರ್ಥ :- ಈ ಮೂರು ಭಾವಗಳನ್ನು ಸಂಕ್ಷೇಪವಾಗಿ ವರ್ಣಿಸ ಲಾಗುವುದು.

ದುಃಖಪ್ರದಾಶ್ವಭ್ರಗತಿರ್ಭವೇದ್ವಾ ।
ಶುಭೋಪಯೋಗಾತ್ಸುಗತಿಸ್ತಿರಶ್ಚಾಂ ॥
ದರಿದ್ರತಾ ಹೀನನೃತಾಪಶುತ್ವಂ ।
ಮಾಯಾವಿತಾ ಬಂಧುವಿಹೀನತಾದಿಃ ॥೨೪೬॥



ಶುಭೋಪಯೋಗೇನ ನಿರೋಗತಾಸ್ಯಾತ್ ।
ಸಾಮ್ರಾಜ್ಯಲಕ್ಷ್ಮೀಃ ಸುಖದಾಸ್ವದಾಸೀ ॥
ಧರ್ಮಾನುಕೂಲಃ ಸುಕುಟುಂಬವರ್ಗಃ ।
ಸಮಾನ್ಯತಾ ಶ್ರೇಷ್ಠ ಜನೈಶ್ಚಪೂಜಾ ॥೨೪೭॥
ಶುದ್ಧೋಪಯೋಗೇನ ನಿಜಾಶ್ರಿತೇನ ।
ಸ್ವರಾಜ್ಯಲಕ್ಷ್ಮೀಶ್ಚ ಭವೇತ್ ಸ್ವದಾಸೀ ॥
ಗತಿಃ ಸ್ಥಿತಿಃ ಸೌಖ್ಯಮಯೀ ಸ್ವಧರ್ಮೇ ।
ತದಾತ್ಮಕೇ ಸ್ವಾತ್ಮರಸೇ ಹಿ ತೃಪ್ತಿಃ ॥೨೪೮॥
ಏವಂ ನೃಣಾಂ ಕಾರಣಕಾರ್ಯಭೇದಾದ್ ।
ಭವೇದ್ವಿಭೇದಃ ಖಲು ತತ್ಫಲೇಽಪಿ ॥
ನಾನಾವ್ಯಥಾದಃ ಸುಖದಃ ಸದೈವ ।
ಶಂಕಾ ನ ಕಾರ್ಯ ವಿಷಯೇ ಕಿಲಾಸ್ಮಿನ್ ॥೨೪೯॥

ಅರ್ಥ :- ಅಶುಭೋಪಯೋಗದ ಫಲವು ಘೋರದುಃಖದಾಯಕವೂ ನರಕ, ತಿರ್ಯಂಚ ಗತಿಗೂ ಕಾರಣವಾಗಿರುತ್ತದೆ. ಮನುಷ್ಯಗತಿಯು ಪ್ರಾಪ್ತ ನಾದರೂ ದಟ್ಟದರಿದ್ರನಾಗಿಯೂ, ಮಹಾಮಾಯಾಚಾರಿಯಾಗಿಯೂ ಮತ್ತು ಬಂಧುಭಾಂಧವರಿಂದ ರಹಿತನಾಗಿಯೂ ಇವೇ ಮೊದಲಾದ ದಾರುಣ ಫಲಕ್ಕೆ ಕಾರಣವಾಗಿರುತ್ತದೆ. ಶುಭೋಪಯೋಗದ ಫಲವಾಗಿ ನಿರೋಗ ಶರೀರ ಪ್ರಾಪ್ತಿಯೂ, ಸಾಮ್ರಾಜ್ಯಲಕ್ಷ್ಮೀಪ್ರಾಪ್ತಿಯೂ, ಧರ್ಮಾನುಕೂಲರಾದ ಕುಟುಂಬ ಪ್ರಾಪ್ತಿಯೂ ಮತ್ತು ಉತ್ತಮ ಪುರುಷರಿಂದ ಮಾನ್ಯತೆಯೂ, ಪೂಜ್ಯತೆಯೂ ಉಂಟಾಗುವುದು. ಕೇವಲ ತನ್ನ ಶುದ್ಧೋಪಯೋಗದ ಫಲವಾ ಗಿ ಮೋಕ್ಷರೂಪ ಸಾಮ್ರಾಜ್ಯಲಕ್ಷ್ಮೀಪ್ರಾಪ್ತಿಯೂ, ಧರ್ಮಾನುಕೂಲರಾದ ಕುಟುಂಬ ಪ್ರಾಪ್ತಿಯೂ ಮತ್ತು ಉತ್ತಮ ಪುರುಷರಿಂದ ಮಾನ್ಯತೆಯೂ, ಪೂಜ್ಯತೆಯೂ ಉಂಟಾಗುವುದು. ಕೇವಲ ತನ್ನ ಶುದ್ಧೋಪಯೋಗದ ಫಲವಾಗಿ ಮೋಕ್ಷರೂಪ ಸಾಮ್ರಾಜ್ಯಲಕ್ಷ್ಮಿಯು ದಾಸಿಯಾಗುವಳು. ಅನುಂತಸುಖ ಮಯ ರೂಪ ಆತ್ಮನ ಶುದ್ಧಸ್ವರೂಪದಲ್ಲಿ ಸ್ಥಿತಿಯು ಮತ್ತು ಶುದ್ಧ ಚೈತನ್ಯ ಸ್ವರೂಪ ಆತ್ಮಸುಖದಲ್ಲಿ ಅನಂತ ತೃಪ್ತಿಯು ಉದ್ಭವಿಸುವುದು. ಹೀಗೆ

ಮಾನವರ ಕಾರಣಕಾರ್ಯಗಳ ಭೇದದಿಂದ ಅವುಗಳ ಫಲಗಳಲ್ಲಿಯೂ ಭೇದವುಂಟಾಗುವುದು. ಕೆಲವು ಕಾರಣಕಾರ್ಯಗಳ ಫಲವು ನಾನಾವಿಧ ದುಃಖವನ್ನು ಸುಖವನ್ನುಂಟುಮಾಡುವುದರಲ್ಲಿ ಯಾವ ಸಂದೇಹವೇ ಇಲ್ಲವು.

ಭಾವಾರ್ಥ :- ಈ ಸಂಸಾರದಲ್ಲಿ ನರಕನಿಗೋದಾದಿಗಳ, ತಿರ್ಯಂಚ ಮತ್ತು ಮನುಷ್ಯ ಪರ್ಯಾಯಗಳ ಶಾರೀರವು, ಮಾನಸಿಕವೂ, ಆಕಸ್ಮಿಕವೂ, ಕುಟುಂಬಸಂಬಂಧವೂ ಆದ ದುಃಖಕಾರ್ಪಣ್ಯಗಳೆಲ್ಲವು ಅಶುಭೋಪ ಯೋಗದ ಫಲವಾಗಿದೆ. ಇದೇ ಪ್ರಕಾರವು ಧನಸಾಂಪತ್ತಿಕವೂ, ಇಂದ್ರಿಯ ಜನ್ಯವೂ ಕುಟುಂಬಸಂಬಂಧವೂ ಆದ ಸುಖಾನುಕೂಲಗಳುಂಟಾಗುವುದು ಶುಭೋಪಯೋಗದ ಫಲವಾಗಿರುತ್ತದೆ. ಮತ್ತೆ ಶುದ್ಧೋಪಯೋಗದ ಫಲವು ಸಾಕ್ಷಾತ್ ಮೋಕ್ಷಫಲವಾಗಿರುತ್ತದೆ. ಹೀಗೆ ಈ ಪ್ರಕಾರದ ಕಾರಣಗಳ ಭೇದದಿಂದ ಕಾರ್ಯದಲ್ಲಿಯೂ ಭೇದವುಂಟಾಗುವುದೆಂಬುದರಲ್ಲಿ ಸಂದೇಹ ವಿಲ್ಲವು.

ಈ ಗ್ರಂಥದ ಸಾರಾಂಶ ವಿವರಣೆ

ಕೌಕೇವಲಂ ಕ್ಲೇಶಕರೋಽಸ್ತಿನಿಂದ್ಯೋಽ- ।
ಶುಭೋಪಯೋಗೋ ವಿಷವದ್ವ್ಯಥಾದಃ ॥
ಶುಭೋಪಯೋಗೋ ಸ್ವಸುಖಪ್ರದೋಽಸ್ತಿ ।
ಶುದ್ಧೋಪಯೋಗೋ ನಿಜಸೌಖ್ಯದಾತಾ ॥೮೫೦॥

ಜ್ಞಾತ್ವೇತಿ ಮುಕ್ತ್ವಾಹ್ಯಶುಭೋಪಯೋಗಂ ।
ಕ್ವಚಿತ್ಪ್ರವೃತ್ತಿಶ್ಚ ಶುಭೋಪಯೋಗೇ ॥
ಕುರ್ವನ್ ಸದಾ ತಿಷ್ಠತು ಸರ್ವಲೋಕಃ ।
ಶುದ್ಧೋಪಯೋಗೇ ಹಿ ಮಮಾಪಿ ಚಾತ್ಮಾ ॥೮೫೧॥

ಅರ್ಥ :- ಅಶುಭೋಪಯೋಗವು ದಾರುಣದುಃಖವನ್ನುಂಟುಮಾಡು ವುದೂ, ಅತಿನಿಂದ್ಯವೂ ಮತ್ತು ಹಾಲಾಹಲ ವಿಷರೂಪವೂ ಆಗಿರುವುದು. ಶುಭೋಪಯೋಗವು ಇಂದ್ರಿಯ ಜನ್ಯಸುಖಕಾರಕವೂ ಆಗಿರುತ್ತದೆ ಮತ್ತು ಶುದ್ಧೋಪಯೋಗವು ತನ್ನ ಶುದ್ಧಾತ್ಮನಿಂದುತ್ಪನ್ನವಾಗಿರುವ ಅನಂತ ಸುಖ



ವನ್ನೀಯುವುದೆಂಬುದನ್ನು ಈ ಮೂರು ಯೋಗಗಳ ವಿಚಾರವನ್ನು ತಿಳಿದು ಎಲ್ಲ ಭವ್ಯಜೀವಗಳು ಅಶುಭೋಪಯೋಗವನ್ನು ಸರ್ವಥಾಬಿಟ್ಟು ಶುದ್ಧೋಪ ಯೋಗದಲ್ಲಿ ಸ್ಥಿರಮನಸ್ಸುಳ್ಳವರಾಗಬೇಕು. ಇದೇ ರೀತಿಯಾಗಿ ಈ ನಮ್ಮ ಆತ್ಮನು ಕೂಡಾ ಈ ಶುದ್ಧೋಪಯೋಗದಲ್ಲಿ ಸದಾಕಾಲವೂ ಸ್ಥಿರವಾಗಿರ ಬೇಕೆಂದು ಭಾವಿಸಿಕೊಂಡಿರುತ್ತೇವೆ. ಇದೇ ಗ್ರಂಥದ ಮುಖ್ಯಸಾರವಾಗಿದೆ.

ಭಾವಾರ್ಥ :- ಈ ಗ್ರಂಥದಲ್ಲಿ ಅಶುಭೋಪಯೋಗ, ಶುಭೋಪ ಯೋಗ ಮತ್ತು ಶುದ್ಧೋಪಯೋಗ ಈ ಮೂರು ಭಾವನೆಗಳ ಫಲವು ವರ್ಣಿಸಲ್ಪಟ್ಟಿರುವುದು. ಈ ಮೂರರಲ್ಲಿ ಅಶುಭೋಪಯೋಗವು ಸರ್ವಥಾ ಜೀವಿಸುವುದಕ್ಕೆ ಅಯೋಗ್ಯವಾಗಿರುತ್ತದೆ. ಶುಭೋಪಯೋಗವು ಯದ್ಯಪಿ ತ್ಯಜಿಸುವುದಕ್ಕೆ ಯೋಗ್ಯವಾಗಿದ್ದರೂ ಶುದ್ಧೋಪಯೋಗದ ಪ್ರಾಪ್ತಿಯಾಗು ವವರೆಗೆ ಅದರಲ್ಲಿ ಪ್ರವರ್ತಿಸುವುದು ಒಳ್ಳೆಯದು. ಶುದ್ಧೋಪಯೋಗದ ಪ್ರಾಪ್ತಿಯಾದ ಮೇಲೆ ಶುಭೋಪಯೋಗವನ್ನು ಕೂಡ ಬಿಟ್ಟುಬಿಡಬೇಕು. ಶುದ್ಧೋಪಯೋಗವು ಮೋಕ್ಷಸುಖದಾಯಕ ಚಿಂತಾಮಣಿ ರತ್ನವಾಗಿರುತ್ತದೆ. ಉಳಿದ ಶುಭ ಮತು ಅಶುಭಯೋಗಗಳೆರಡು ಸಂಸಾರಕ್ಕೆ ಕಾರಣೀಭೂತಗ ಳಾಗಿವೆ. ಆದ್ದರಿಂದ ಸಕಲಜೀವಗಳು ಶುದ್ಧೋಪಯೋಗವನ್ನು ಪ್ರಾಪ್ತಮಾಡಿಕೊಂಡು ಅದರಲ್ಲಿಯೆ ಸ್ಥಿರವಾಗಿರಲಿ, ನಮ್ಮ ಆತ್ಮನು ಕೂಡಾ ಶುದ್ಧೋಪಯೋಗ ಭಾವನಾತತ್ಪರನಾಗಿರಲೆಂದು ಗ್ರಂಥಕರ್ತೃಗಳಾದ ಆಚಾರ್ಯ ಶ್ರೀ ಕುಂಥುಸಾಗರಮುನೀಂದ್ರರು ಭಾವನೆ ಇಟ್ಟು ಕೊಂಡಿರುತ್ತಾರೆ.

# ಗ್ರಂಥದ ಉಪಸಂಹಾರ

ಏವಂ ಯಥಾವತ್ಕಥಿತಂ ಸ್ವರೂಪಂ ।
ಭಾವತ್ರಯಾಣಾಂ ಸಕಲಾತ್ಮಶುದ್ಧ್ಯೈ ॥
ಸ್ವಾನಂದ ತುಷ್ಟೇನ ತಮೋಹರೇಣ ।
ಶ್ರೀ ಕುಂಥುನಾಮ್ನಾವರ ಸೂರಿಣಾತ್ರ ॥೭೫೨॥

ಅರ್ಥ :- ಅಜ್ಞಾನ ಅಂಧಕಾರವನ್ನು ದೂರಮಾಡಿ ಆತ್ಮಜನ್ಯಸುಖದಲ್ಲಿ ಆನಂದಭರಿತರಾದ ಆಚಾರ್ಯವರ್ಯ ಶ್ರೀ ಕುಂಥುಸಾಗರಯತಿಗಳು ಸಕಲ ಆತ್ಮರುಗಳ ಕಲ್ಯಾಣಕ್ಕಾಗಿ ಅಶುಭ, ಶುಭ, ಮತ್ತು ಶುದ್ಧ ಭಾವತ್ರಯಗಳ ಯಥಾರ್ಥ ಸ್ವರೂಪವನ್ನು ಈ ಗ್ರಂಥದಲ್ಲಿ ನಿರೂಪಿಸಿರುತ್ತಾರೆ.

ಭಾವಾರ್ಥ :- ನಾನಾ ಪ್ರಕಾರಗಳಿಂದ ಅಶುಭೋಪಯೋಗ, ಶುಭೋಪಯೋಗ ಮತ್ತು ಶುದ್ಧೋಪಯೋಗಗಳ ಫಲಗಳನ್ನು, ಸ್ವರೂಪವನ್ನು ಸ್ಪಷ್ಟೀಕರಿಸುತ್ತಾರೆ. ಇದರಿಂದ ಅಶುಭ ಮತ್ತು ಶುಭೋಪಯೋಗಗಳನ್ನು ತ್ಯಜಿಸಿ ಶುದ್ಧೋಪಯೋಗವನ್ನು ಧಾರಣೆಮಾಡಬೇಕು. ಆತ್ಮನನ್ನು ಶುದ್ಧಿಗೊಳಿಸಿಕೊಳ್ಳಬೇಕು. ಮೋಕ್ಷಲಕ್ಷ್ಮಿಯು ಪ್ರಾಪ್ತವಾಗುವುದೆಂಬ ಸದಭಿಪ್ರಾಯದಿಂದ ಸ್ಪಷ್ಟೀಕರಿಸುತ್ತಾರೆ. ಎಲ್ಲ ಭವ್ಯಜೀವಗಳು ಈ ಕಾರ್ಯದಲ್ಲಿ ಸತತವು ಪ್ರಯತ್ನಶೀಲರಾಗಬೇಕು. ಇತಿ ಶುಭಂ.

ಇತಿ ಆಚಾರ್ಯವರ್ಯ ಶ್ರೀ ಕುಂಥುಸಾಗರ ವಿರಚಿತೇ
ಭಾವತ್ರಯ ಫಲಪ್ರದರ್ಶೀ ನಾಮ್ನಿಗ್ರಂಥೇ -
ಶುದ್ಧೋಪಯೋಗ ವರ್ಣನೋ ನಾಮಾ
ತೃತೀಯೋಽಧ್ಯಾಯಃ ॥

ಈ ಪ್ರಕಾರ ಆಚಾರ್ಯವರ್ಯ ಶ್ರೀ ಕುಂಥುಸಾಗರ ವಿರಚಿತ ಭಾವತ್ರಯ ಫಲಪ್ರದರ್ಶೀ ಗ್ರಂಥದ "ಧರ್ಮರತ್ನ" ಪಂಡಿತ ಲಾಲಾ ರಾಮಾಶಾಸ್ತ್ರಿಗಳ ಹಿಂದೀ ಟೀಕೆಯಿಂದ ಸಿದ್ಧಾಂತಾಚಾರ್ಯ ಶ್ರೀಕಾಂತ ಶಾಸ್ತ್ರಿಗಳ ಸರಳ ಕನ್ನಡ ಭಾಷಾನುವಾದಯುಕ್ತ ಶುದ್ಧೋಪಯೋಗಫಲವನ್ನು ವಿವರಿಸಿರುವ ಮೂರನೆಯ ಅಧ್ಯಾಯವು ಸಮಾಪ್ತ.



# ಪರಿಶಿಷ್ಟ

| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಅಶಕ್ತ | ಪರರ ವಸ್ತ್ರ / ಅನ್ನ / ಪಾನ ಅಪಹರಣ- ಜೀವಿಗಳಿಗೆ ಹಿಂಸೆ | ೨೨ |
| ಅಪಮೃತ್ಯು | ಜೀವಗಳ ಹಿಂಸೆಗೆ ಪ್ರಚೋದನೆ/ ಅನುಮೋದನೆ | ೩೨ |
| ಅಣ್ಣ- ತಮ್ಮಂದಿರಲ್ಲಿ ವಿರೋಧ | ಅಣ್ಣ- ತಮ್ಮ / ಪಶು- ಪಕ್ಷಿ / ಬಂಧು ಬಾಂಧವರಲ್ಲಿ ಜಗಳ ಅಪಮಾನಿಸುವುದು. | ೩೬ |
| ಅಪಮೃತ್ಯು | ಜೀವಿಗಳಿಗೆ ವಿಷ ಹಾಕುವುದು | ೮೭ |
| ಅನಾವೃಷ್ಟಿ | ಧರ್ಮನಾಯಕರ/ ಮುನಿಗಳಿಗೆ ವಿಹಾರ/ ದೇವಪೂಜೆ/ ಸತ್ಕಾರ್ಯ ಇಲ್ಲ | ೧೧೩ |
| ಅನೇಕ ಜೀವಗಳ ಅಧಿಪತಿ | ದೇವ/ ಗುರು/ ಧರ್ಮ/ ಧರ್ಮಾತ್ಮರ ಸೇವೆ, ದೀನ, ಹೀನ ಧರ್ಮಬಂಧುಗಳಿಗೆ ಅನ್ನ, ವಸ್ತ್ರ ಕೊಡುವುದು. | ೧೩೦ |
| ಅಲ್ಪಭುಕ್ತ (ಮಿತಾಹಾರಿ) | ಮುನಿಗಳಿಗೆ ಆಹಾರದಾನ, ದೀನರಿಗೆ ಅನ್ನ, ವಸ್ತ್ರ, ಮನೆ ನೀಡುವುದು, ಅಲ್ಪ ಭೋಜನದಿಂದ ತೃಪ್ತನಾಗುವುದು | ೧೫೧ |
| ಅನೇಕ ಜೀವ ಏಕ ಕಾಲದಲ್ಲಿ ಸುಖಿ | ಪಂಚಕಲ್ಯಾಣ ಪೂಜಾಮಹೋತ್ಸವಗಳಲ್ಲಿ ಭಾಗಿಯಾಗುವುದು, ತೀರ್ಥಕ್ಷೇತ್ರ ದರ್ಶನ, ಮುನಿಗಳಿಗೆ ಆಹಾರದಾನ | ೧೬೦ |
| ಅನೇಕ ಜೀವ- ಏಕ ಕಾಲದಲ್ಲಿ ಮೋಕ್ಷ | ತೀರ್ಥಂಕರರು ದೀಕ್ಷೆ ಧಾರಣೆ ಮಾಡುವುದನ್ನು ಕಾಣುವ ಜೀವಗಳನ್ನು ಸ್ತುತಿ ಮಾಡುವುದು | ೧೬೧ |
| ಆಡು (ಮೇಕೆ) | ವ್ಯರ್ಥ ಸಂಚಾರ/ ತನ್ನಾತ್ಮ ಪ್ರಶಂಸೆ/ ಪರನಿಂದೆ | ೭೯ |
| ಆದರ ಸತ್ಕಾರಗಳಿಗೆ ಪಾತ್ರರಾಗದಿರುವುದು | ಮುನಿಗಳ ವಂದನೆ/ ಸ್ತುತಿ/ ಸೇವೆ ಮಾಡದಿರುವುದು | ೩೧ |
| ಆನೆ | ವ್ರತ/ ಉಪವಾಸ/ ಜಪತಪ ಮಾಡದಿರುವುದು, ದೇವ/ ಧರ್ಮ/ ಗುರು ಸೇವೆ ಮಾಡದಿರುವುದು | ೯೩ |
| ಆರ್ಯಾ ಖಂಡದಲ್ಲಿ ಜನನ | ದುಃಖಿಗಳಿಗೆ ಸುಖ ಶಾಂತಿ ಸಿಗುವಂತೆ ಮಾಡುವುದು, ಅನ್ನ ವಸ್ತ್ರ ನೀಡುವುದು | ೧೫೦ |
| ಆಪತ್ತಿನಲ್ಲಿ ಸಹಾಯ | ಕಷ್ಟದಲ್ಲಿರುವವರಿಗೆ ವಸ್ತ್ರ, ಔಷಧ, ಆಹಾರ ನೀಡಿ ರಕ್ಷಣೆ ಮಾಡುವುದು | ೧೬೩ |
| ಆತ್ಮೀಯ ಶುದ್ಧ ಸ್ವರೂಪ ಅನುರಾಗ | ದರ್ಶನ ಮೋಹನೀಯ ಕರ್ಮದ ಕ್ಷಯ, ತನ್ನ ಶುದ್ಧಾತ್ಮದಲ್ಲಿ ಸಂತುಷ್ಟರಾದ ನಿರ್ಗ್ರಂಥ ಗುರುಗಳಲ್ಲಿ ವಿಶ್ವಾಸ, ಜಿನಧರ್ಮದಲ್ಲಿ ವಿಶ್ವಾಸ, ಶ್ರದ್ಧೆ | ೧೯೦ |

| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಧನ ಪ್ರಾಪ್ತಿ ಆಗದು | ಬೀಜ ಬಿತ್ತಿದಂತೆ ಫಲ ನಿತ್ಯ ಪೂಜೆ-ಸುಖಪ್ರಾಪ್ತಿ ಬೇಡಿದರೆ ಫಲವಿಲ್ಲ, ಪುಣ್ಯಕಾಯಕ-ಆಶಾಪಿಶಾಚಿ ನಾಶ | |
| ಇಚ್ಛಿತ ಪದಾರ್ಥ ಪ್ರಾಪ್ತಿ | ಮುನಿ, ಆರ್ಯಿಕೆ, ಶ್ರಾವಕ, ಶ್ರಾವಕಿ, ಚತುಸ್ಸಂಘಕ್ಕೆ ನಿರ್ದೋಷ ವಾದ ಔಷಧಿ, ನಿರ್ಮಲ ಆಹಾರ, ಜಲ ನೀಡುವುದು | ೧೪೬ |
| ಉಚ್ಚಕುಲ ಜನನ-ಧನ ಹೀನ | ಪರನಿಂದೆ/ ಗುರುಜನರ ಅಪಮಾನ | ೫೯ |
| ಉತ್ತಮ ಕಾರ್ಯ-ಶ್ಲೋಕನಿಂದೆ | ಒಳ್ಳೆ ಕೆಲಸ ಮಾಡುವವರನ್ನು ದೂಷಿಸಿ ನಿಂದಿಸುವುದು | ೧೧೧ |
| ಉತ್ತಮ ಪತಿ ಪ್ರಾಪ್ತಿ | ದೇವ ಪೂಜೆ, ಸತ್ಪಾತ್ರದಾನ, ಧರ್ಮರಕ್ಷಣೆ ಮಾಡುವುದು | ೧೨೩ |
| ಉತ್ತಮ ಪುತ್ರಿ | ತಮ್ಮ / ಪರರ ಹೆಣ್ಣುಮಕ್ಕಳಿಗೆ ಸನ್ಮಾರ್ಗ ತೋರುವುದು, ದಾನ ಪೂಜೆ ಮಾಡುವುದು | ೧೨೪ |
| ತಮ್ಮ/ ಪರರ ಮಕ್ಕಳಿಗೆ ಬುದ್ಧಿ ಹೇಳಿ ಸನ್ಮಾರ್ಗ ತೋರುವುದು | ತಂದೆತಾಯಿಯರಿಗೆ ಭಕ್ತಿ ವಿನಯ ತೋರಿಸುವುದು | ೧೨೨ |
| ಉತ್ತಮ ಪತ್ನಿ | ಉತ್ತಮ ಸ್ತ್ರೀಯರ ಪ್ರಶಂಸೆ, ದೇವಪೂಜೆ, ದಾನ, ಸತ್ಕಾರ್ಯ | ೧೨೫ |
| ಉದಾರಿ | ವೀತರಾಗ ಮುನಿಗಳಿಗೆ ಆಹಾರ ನೀಡುವುದು, ಸಹಾಯ ಮಾಡುವುದು, ಅಜ್ಞಾನಿಗಳಿಗೆ ಮೋಕ್ಷ ಮಾರ್ಗ ತೋರುವುದು | ೧೩೬ |
| ಉತ್ತಮ ಕುಲ ಜನನ | ಪರ ಪ್ರಶಂಸೆ, ದೀನ-ದಲಿತರ ರಕ್ಷಣೆ | ೧೫೬ |
| ಏಕಕಾಲಕ್ಕೆ ಅನೇಕ ಜೀವಗಳ ಮರಣ | ಅನೇಕರು ಸೇರಿ ಮಹಾತ್ಮರು, ಮುನಿಗಳ ನಿಂದನೆ, ವಧಿಸುವುದು, ಪಕ್ಷಿ, ಪ್ರಾಣಿಗಳ ಜಗಳದಲ್ಲಿ ಆನಂದಿಸುವುದು. | ೬೩ |
| ಏಕಕಾಲಕ್ಕೆ ಅನೇಕ ರೋಗಗಳು | ನಿರ್ಗ್ರಂಥ ಗುರುಗಳ ಬೆವರು, ಮಲಿನ ಶರೀರ ನೋಡಿ ಹೇಸಿಕೆ/ ನಿಂದನೆ/ ಅಪಮಾನಿಸುವುದು | ೮೬ |
| ಎಮ್ಮೆ / ಕೋಣ | ಧರ್ಮೋಪದೇಶ ಕೇಳದಿರುವುದು | ೭೮ |
| ಒಂಟೆ | ದೇವ/ ಗುರು/ ಗ್ರಂಥಗಳಿಗೆ ವಂದಿಸದಿರುವುದು | ೯೨ |
| ಅಂಗಹೀನ | ಪರಜೀವ ಅಂಗಛೇದನೆ (ಕತ್ತರಿಸುವುದು) ಅಂಗಹೀನರ ಹಾಸ್ಯ ಮಾಡುವುದು | ೫೬ |
| ಅಂಗೋಪಾಂಗ ನಾಗುವುದು | ಪರರನ್ನು, ಅನ್ಯ ಜೀವಿಗಳ ರಕ್ಷಣೆ, ಪೋಷಣೆ ಮಾಡುವುದು | ೧೫೫ |
| ಕುರುಡ | ಪರರ ಕಣ್ಣು/ ಸ್ತ್ರೀ/ ಧನ/ ಅಪಹರಣ/ ಕುರುಡರನ್ನು ಹಾಸ್ಯ ಮಾಡುವುದು | ೧೦ |



| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಕುಂಟ | ಪರರ ಕೈ/ ಕಾಲು ಕತ್ತರಿಸುವುದು, ವಿಕಲಾಂಗರ ಹಾಸ್ಯ ಮಾಡುವುದು | ೧೧ |
| ಕುಪುತ್ರಿ ಪ್ರಾಪ್ತಿ | ಒಳ್ಳೆ ಹೆಣ್ಣು ತೋರಿಸಿ, ಮದುವೆಯಲ್ಲಿ ಕೆಟ್ಟ ಹೆಣ್ಣು ಗಂಟು ಹಾಕುವುದು | ೧೩ |
| ಕಿವುಡ | ಕೆಟ್ಟಕತೆ ಹೇಳುವುದು, ಕಿವುಡರನ್ನು ಹಾಸ್ಯ ಮಾಡುವುದು | ೧೫ |
| ಕೃಪಣ/ ಜಿಪುಣ | ದಾನ/ ಧರ್ಮಗಳಿಗೆ ವಿಘ್ನ ಮಾಡುವುದು | ೨೩ |
| ಕುರೂಪ | ವಿಕೃತಿ ಮಾಡುವುದು, ಕುರೂಪಿಗಳ ಹಾಸ್ಯ ಮಾಡುವುದು | ೨೬ |
| ಕೋಪಿಷ್ಠ | ಜನರಲ್ಲಿ ಕಲಹ/ ಜಗಳ ಉಂಟುಮಾಡಿ ಆನಂದಿಸುವುದು | ೨೯ |
| ಕಳ್ಳ | ಕಳ್ಳನಿಗೆ ಬೆಂಬಲ/ ಆಶ್ರಯ | ೩೩ |
| ಕ್ರಿಯಾಹೀನ | ದೇವಪೂಜೆ, ಗುರುವಂದನೆ, ಸ್ವಾಧ್ಯಾಯ ಮಾಡದೆ ಇರುವುದು | ೩೪ |
| ಕುಳ್ಳ | ಕುಳ್ಳರ ನಿಂದನೆ/ ಅಪಮಾನ | ೪೨ |
| ಕುಭೋಗ ಭೂಮಿ ಜನನ | ಮಿಥ್ಯಾದೃಷ್ಟಿ ಸಾಧುವಿಗೆ ಆಹಾರ, ಔಷಧ ದಾನ, ಸಮ್ಯಗ್ದೃಷ್ಟಿ ಸಾಧುವಿಗೆ ಅಪಮಾನ ನಿಂದನೆ | ೪೪ |
| ಕುಗ್ರಾಮವಾಸಿ | ಪರರ ಮೇಲೆ ಅಸತ್ಯ ದೋಷಾರೋಪಣೆ/ಸ್ವತ್ತು ಅಪಹರಣ | ೪೫ |
| ಕುತ್ಸಿತ ಕಾವ್ಯ ರಚನೆ | ಕುತ್ಸಿತ ಶಾಸ್ತ್ರ ಓದುವುದು | ೪೯ |
| ಕಪಟ ಜೀವಿ | ದುಷ್ಟ, ಮೋಸಗಾರರನ್ನು ಹೊಗಳುವುದು/ ಮುನಿಗಳಿಗೆ ಹಠ, ಕಪಟ ಭಾವನೆಯಿಂದ ಆಹಾರ ನೀಡುವುದು | ೬೧ |
| ಕಾಮವಾಸನೆ | ಪೂರ್ವ ಜನ್ಮದಲ್ಲಿ ಸಂಬಂಧ, ವ್ಯಭಿಚಾರ, ಮೋಹ | ೬೪ |
| ಕೋಪ | ಪೂರ್ವ ಜನ್ಮದ ಶತ್ರು/ ತನ್ನ ವಂಶಜರ ಕೊಲೆ ಮಾಡಿದ್ದವರನ್ನು ನೋಡುವುದು | ೬೫ |
| ಕಾಗೆ | ಅಭಕ್ಷ್ಯ, ಮಲಿನ ಭಕ್ಷಣೆ, ಕಹಿ ಮಾತು ಆಡುವುದು | ೮೦ |
| ಕಾರಾಗೃಹವಾಸ | ನಿರಪರಾಧಿಗಳನ್ನು ಅಪರಾಧದಲ್ಲಿ ಸಿಲುಕಿಸುವುದು | ೮೪ |
| ಕಂಠ ರೋಗ | ಪರನಿಂದೆ, ದ್ವೇಷ, ಪ್ರತೀಕಾರ ಮಾಡುವುದು | ೯೧ |
| ಕಪಿ | ಪ್ರಯೋಜನವಿಲ್ಲದೆ ತಿರುಗುವುದು, ಗಿಡ ಬಳ್ಳಿ, ಜಿನಾಲಯ ಹಾಳುಮಾಡುವುದು | ೧೦೪ |
| ಕುದೇವ/ ಕುಶಾಸ್ತ್ರ/ ಕುಗುರು ಪ್ರಶಂಶೆ | ಕುದೇವ/ ಕುಶಾಸ್ತ್ರ/ ಕುಗುರು ಶ್ರದ್ಧೆ | ೧೦೬ |
| ಕ್ರಿಮಿ/ ಕೀಟ | ಸೂಕ್ಷ್ಮ ಪ್ರಾಣಿ ರಕ್ಷಿಸದೆ ಇರುವುದು/ ದೇವ, ಗುರು, ಶಾಸ್ತ್ರದ ದರ್ಶನ ಮಾಡದಿರುವುದು/ ಧನಮದ | ೧೦೯ |

| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಕೀರ್ತಿವಂತ | ತೀರ್ಥಂಕರರ ಗುಣಕೀರ್ತನೆ, ಧರ್ಮಾತ್ಮರ ಸತ್ಕಾರ, ಗುರುಸೇವೆ | ೧೨೬ |
| ಕೇವಲಜ್ಞಾನಪ್ರಾಪ್ತಿ | ಪರಮ ಪವಿತ್ರ ರತ್ನತ್ರಯರೂಪ, ಆತ್ಮನಲ್ಲಿ ಮಗ್ನ, ಸಕಲ ಪದಾರ್ಥ ನೋಡುವ ಮುನಿಶ್ರೇಷ್ಠರು | ೧೮೯ |
| ಗರ್ಭಪಾತ | ಪರರ ಮಕ್ಕಳಿಗೆ ವಿಷ ನೀಡುವುದು, ಗರ್ಭಪಾತ ಮಾಡಿಸಿ ಆನಂದಿಸುವುದು | ೬೮ |
| ಗುಳ್ಳೆನರಿ | ಮೋಸಗಾರಿಗೆ/ ಧಾರ್ಮಿಕ ಭಾವನೆಯಿಂದ ದೂರ | ೬೩ |
| ಗೂಬೆ | ದೇವ/ ಗುರು/ ಮುನಿ ದರ್ಶನ ಮಾಡದಿರುವುದು | ೯೩ |
| ಗುಬ್ಬಚ್ಚಿ | ಧನಸಂಪಾದಿಸುವುದು ದಾನ ಸತ್ಕಾರ್ಯ ಮಾಡದೆ ತನ್ನ ಕುಟುಂಬಕ್ಕೇ ಬಳಸುವುದು | ೯೯ |
| ಗಿಣಿ | ತನ್ನನ್ನು ತಾನು ಹೊಗಳಿಕೊಳ್ಳುವುದು | ೧೦೦ |
| ಗೃಧ್ರಪಕ್ಷಿ / ಹದ್ದು | ಸ್ವಯಂ ದುಡಿಯದೆ ಪರರ ಮನೆಯಲ್ಲಿ ಊಟ ಮಾಡುವುದು | ೧೦೩ |
| ಚಂಡಾಲ ಹಸ್ತ ಮರಣ | ಪಶು ಹಿಂಸೆ/ ಮಧುಮಾಂಸ ಸೇವನೆ | ೯೨ |
| ಚೇಳು | ತನ್ನ ಪ್ರಸಿದ್ಧಿಗಾಗಿ ಇತರರಿಗೆ ವೇದನೆ ಮಾಡುವುದು | ೯೮ |
| ಚಿತ್ತ ವಿಕಾರ | ಪರಪೀಡನೆ | ೧೦೮ |
| ಜಿಪುಣ | ದಾನಧರ್ಮಗಳಿಗೆ ವಿಘ್ನ ಮಾಡುವುದು | ೨೩ |
| ಜನಿಸಿದೊಡನೆ ಮರಣ | ಹುಟ್ಟಿದ ಕೂಸುಗಳ ಕೊಲೆ ಮಾಡುವುದು | ೮೩ |
| ಜಿಗಣೆ | ದೋಷಗಳ ಗ್ರಹಣ, ಸಾಧು, ಸಜ್ಜನರಿಗೆ ಅಪಮಾನ | ೯೪ |
| ತಾಯಿ ಮಕ್ಕಳಲ್ಲಿ ಜಗಳ | ತಾಯಿ- ಮಕ್ಕಳಿಗೆ ಜಗಳ/ ಪರರ ಅಪಮಾನಕ್ಕೆ ಸಂತಸಪಡುವುದು | ೩೩ |
| ತಂದೆ- ಮಕ್ಕಳ ಜಗಳ | ತಂದೆ- ಮಕ್ಕಳ ಜಗಳದಲ್ಲಿ ಸಂತಸಪಡುವುದು, ಗುರುಗಳಿಗೆ ಅವಿನಯ/ ತಿರಸ್ಕಾರ | ೩೯ |
| ತಂದೆ- ಮಕ್ಕಳಲ್ಲಿ ಸ್ನೇಹ | ತಂದೆ- ಮಕ್ಕಳಲ್ಲಿ ಪರಸ್ಪರ ಪ್ರೇಮ, ಮೋಹ, ಸ್ನೇಹ ಕಂಡು ಪ್ರಸನ್ನನಾಗುವುದು | ೧೪೪ |
| ತೀರ್ಥಂಕರ ಪದವಿ | ಷೋಡಶ ಭಾವನೆ, ಸಕಲ ಜೀವಿಗಳ ದುಃಖ ಹೋಗಲಾಡಿಸುವುದು, ನಿರ್ಮಲ ಸಮ್ಯಕ್‌ದರ್ಶನ, ಪಂಚ ಪರಮೇಷ್ಠಿಗಳಲ್ಲಿ ವಿನಯ, ಭಕ್ತಿ, ಸಂಸಾರದಿಂದ/ ಸಂಸಾರದಲ್ಲಿ ಭಯ, ಧರ್ಮ ಪ್ರಭಾವನೆ, ಧರ್ಮಾತ್ಮರಲ್ಲಿ ಅನುರಾಗ | ೧೮೨ |
| ದುಃಖಿ/ ಸದಾಶೋಕ | ಪರರಿಗೆ ದುಃಖ/ ದುಃಖಿತರನ್ನು ಕಂಡು ಸಂತಸಪಡುವುದು | -- |
| ದುಷ್ಟ ಸ್ತ್ರೀ ಪ್ರಾಪ್ತಿ | ಹೆಂಡತಿಯೊಡನೆ ಜಗಳ/ ಉತ್ತಮ ಸ್ತ್ರೀಯರ ನಿಂದನೆ | -- |



| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ದುಷ್ಟ ಸ್ವಭಾವ | ದುರ್ವ್ಯಸನ/ ಲೋಭ/ ನಾಸ್ತಿಕ | ೧೭ |
| ದುಃಖಿವಂಶದಲ್ಲಿ ಜನನ | ಜಗಳ/ ನೀಚ, ಕಠೋರವಚನ, ಪರದೂಷಣೆ | ೧೯ |
| ದುಷ್ಟ ಸ್ವಭಾವ | ದುರ್ಬುದ್ಧಿ, ಕುಮಾರ್ಗ/ ದುರ್ಜನರ ಸಹವಾಸ | ೨೦ |
| ದೀರ್ಘಾಯುಷ್ಯ ಮತ್ತು ದುಃಖಿ | ವಿನಾಕಾರಣ ಗಿಡ ಮರ ಕಡಿಯುವುದು | ೩೧ |
| ದೇಶ- ವಿದೇಶ ಸಂಚಾರ | ಸೇವಕರಿಂದ ಕೆಲಸ ಮಾಡಿಸಿಕೊಂಡು ಧನ ನೀಡದಿರುವುದು | ೬೦ |
| ದುರ್ವ್ಯಸನ ಹಣವ್ಯಯ | ದುರ್ಮಾರ್ಗದಲ್ಲಿ ಹಣವ್ಯಯ, ಪರಸ್ತ್ರೀ ಅಪಹರಣ, ದುರ್ವ್ಯಸನ | ೬೯ |
| ದುಷ್ಟ ಸ್ವಭಾವ | ದುರ್ಜನರೊಂದಿಗೆ ವಾದ ವಿವಾದ/ ಸಾಧು ಸಜ್ಜನರೊಡನೆ ಕಲಹ | ೮೧ |
| ದರಿದ್ರ (ಭಿಕ್ಷುಕ) | ಧರ್ಮ- ಕರ್ಮ ರಹಿತನಾಗುವುದು, ಮದ್ಯ ಮಾಂಸ ಭಕ್ಷಣೆ, ಇಂದ್ರಿಯ ಲೋಲಪನಾಗುವುದು | ೧೦೭ |
| ದೇವ ಪರ್ಯಾಯ ಪ್ರಾಪ್ತಿ | ನಾನಾ ವ್ರತ, ಜಪ, ತಪ, ಉಪವಾಸ, ಧ್ಯಾನ, ದೇವ, ಗುರು, ಶಾಸ್ತ್ರಸೇವೆ, ಸತ್ಪಾತ್ರದಾನ ಮಾಡುವುದು | ೧೪೭ |
| ದೀರ್ಘಾಯುಷಿ- ಸುಖಿ | ಕ್ರೂರ ಪ್ರಾಣಗಳಿಂದ ಜೀವಿಗಳ ರಕ್ಷಣೆ, ಬಂಧನದಲ್ಲಿರುವವರ ಬಿಡುಗಡೆ, ರೋಗಿಗಳಿಗೆ ಆಹಾರ ಔಷಧ ನೀಡುವುದು | ೧೩೪ |
| ದೇವತೆಗಳು ಭಕ್ತರ ಮನೆಯಲ್ಲಿ ಸೇವಕ | ಸಕಲ ಜೀವಸೇವೆ, ಧಾರ್ಮಿಕ ಭಾವನೆ, ದೇವ, ಮುನಿ, ನಿರ್ಗ್ರಂಥರ ಸೇವೆ. | ೧೭೩ |
| ಧನ ಹೀನ | ಪರದ್ರವ್ಯ ಅಪಹರಣ/ ಕೆಟ್ಟ ಕೆಲಸಕ್ಕೆ ಬಳಕೆ/ ಪರರ ಧನ, ಧಾನ್ಯ, ಮನೆ, ಸಂಪತ್ತುಗಳಿಗೆ ಬೆಂಕಿ ಇಡುವುದು | ೪ |
| ಧನ, ಧಾನ್ಯ ಸಂಪತ್ತು ಸುಟ್ಟು ಹೋಗುವುದು | ಪರರ ಧನ, ಧಾನ್ಯ, ಮನೆ, ಮಠ, ಸಂಪತ್ತುಗಳಿಗೆ ಬೆಂಕಿ ಇಡಲು ಪ್ರಯತ್ನ ಮಾಡುವುದು | ೮೮ |
| ಧನ ನಾಶ | ಪರಧನ ಅಪಹರಣ | ೯೦ |
| ಧರ್ಮಾತ್ಮ | ದಯಾಶೀಲ, ಧರ್ಮಾತ್ಮ, ನಿರ್ಗ್ರಂಥ ಗುರುಗಳನ್ನು ನೋಡಿ ಸಂತೋಷಪಡುವುದು. | ೧೩೪ |
| ಧಾರ್ಮಿಕ ಕಾರ್ಯಕ್ಕೆ ಧನವ್ಯಯ | ಧಾರ್ಮಿಕ ಕಾರ್ಯಕ್ಕೆ ತನ್ನ ಧನ ಉಪಯೋಗಿಸುವುದು, ಸಂತಸ ಪಡುವುದು | ೧೭೪ |
| ಧನವ್ಯಯ- ಧನವೃದ್ಧಿ | ನಿರ್ಗ್ರಂಥಮುನಿಗಳಿಗೆ ಆಹಾರ/ ಔಷಧ/ ಅಭಯ/ ಶಾಸ್ತ್ರ ದಾನ ಮಾಡುವುದು | ೧೭೪ |
| ನೀಚ ಪತಿ ಪ್ರಾಪ್ತಿ | ಗಂಡನೊಡನೆ ಜಗಳ/ ಉತ್ತಮ ಗಂಡನೊಂದಿಗೆ ದ್ವೇಷ | ೭ |

| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ನಿರ್ಭಾಗ್ಯ ಪುತ್ರ/ ನರಕ ದುಃಖ | ಪ್ರಾಣ ಘಾತ, ದೇವ/ ಗುರು/ ಧರ್ಮ ವಿರೋಧಿ, ಸಹೋದರರೊಡನೆ ವೈರ | ೪೧ |
| ನಿರ್ಧನತೆ | ಪರಧನ/ ಸ್ವತ್ತು ಅಪಹರಣ | ೪೮ |
| ನಪುಂಸಕ | ಅತಿಕಾಮಿ/ ನಪುಂಸಕರ ನಿಂದೆ, ಹಾಸ್ಯ ಮಾಡುವುದು | ೫೨ |
| ನೀಚಕುಲ ಜನನ | ಆತ್ಮ ಪ್ರಶಂಸೆ ಮಾಡಿಕೊಳ್ಳುವುದು, ಪರನಿಂದನೆ ಮಾಡುವುದು | ೫೮ |
| ನಾಯಿ | ಸದಾ ಈರ್ಷೆ, ಅಸೂಯೆ, ದುರಭಿಮಾನ/ ವೈರ/ ವಿತಂಡವಾದ/ ಕಾಲಹರಣ ಮಾಡುವುದು | ೬೨ |
| ನವಿಲು | ತಾನು ಪಾಲನೆ ಮಾಡದೆ ಪರರಿಗೆ ಉಪದೇಶ ಮಾಡುವುದು | ೧೦೨ |
| ನಿರೋಗ ಶರೀರ | ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಪ್ರಕಾರದವರಿಗೆ/ ರೋಗಿಗಳಿಗೆ ಭಕ್ತಿಪೂರ್ವಕ ಆಹಾರ, ಔಷಧ ದಾನ ಮಾಡುವುದು | ೧೩೧ |
| ನೀತಿವಂತ | ದೀನರಕ್ಷಣೆ, ಅಸಮರ್ಥರಿಗೆ ಸಹಾಯ, ಹಸಿದವರಿಗೆ ಆಹಾರ, ಬಾಯಾರಿದವರಿಗೆ ನೀರು ನೀಡುವುದು | ೧೩೨ |
| ನಿರ್ಭಯನಾಗಿರುವುದು | ದೀನ, ದುಃಖಿ ಜೀವಗಳಿಗೆ ಅನ್ನ, ನೀರು ಅಭಯ ನೀಡಿ ಕಷ್ಟನಿವಾರಿಸುವುದು | ೧೩೫ |
| ನೀಚಕುಲ- ಧನಪ್ರಾಪ್ತಿ | ಮಿಥ್ಯಾತಪಸ್ವಿ, ಗುರು ಪ್ರಶಂಸೆ ಮಾಡುವುದು, ಆಹಾರ ಔಷಧ ನೀಡುವುದು | ೧೫೮ |
| ಪುತ್ರ ವಿಯೋಗ | ಮಾತಾಪಿತೃಗಳ/ ಸಹೋದರರ ಮೇಲೆ ಕೋಪ | ೩೫ |
| ಪಶು | ದೇವ/ ಗುರು/ ಶಾಸ್ತ್ರನಿಂದನೆ, ಪ್ರಾಣಿಗಳಿಗೆ ಅಧಿಕ ಭಾರ/ ಆಹಾರ ನೀಡದೇ ಇರುವುದು | ೪೩ |
| ಪರಸೇವಕ | ದೀನ ಮನುಷ್ಯರಿಂದ ದುಡಿತ ಮತ್ತು ಅಧೈರ್ಯ ಹೇಳುವುದು | ೫೪ |
| ಪಶು ಜನ್ಮ | ಪರಸ್ತ್ರೀ/ ಹೆಣ್ಣುಮಕ್ಕಳ/ ಮೃಗ ವಶ ಮಾಡಿಕೊಳ್ಳುವುದು | ೬೨ |
| ಪಕ್ಷಿ, ಪುತ್ರ ವಿಯೋಗ | ಅನ್ಯ ಸ್ತ್ರೀ, ಪುತ್ರರು, ಸಹೋದರರನ್ನು ಬೇರ್ಪಡಿಸುವುದು | ೮೯ |
| ಪುಣ್ಯಾತ್ಮರೊಡನೆ ವೈರ | ದುರ್ಜನರ, ನೀಚರ ಸೇವೆ, ಪುಣ್ಯ ಕೆಲಸ ಮಾಡುವವರ ವಿರೋಧ | ೧೧೪ |
| ಪುತ್ರನ ಪುನಃ ಸಮಾಗಮ (ದೂರವಾಗಿದ್ದವನು) | ಪುತ್ರ ದೂರವಾದವರಿಗೆ ಸಮಾಧಾನ, ಧೈರ್ಯ ಹೇಳುವುದು | ೧೪೩ |
| ಪಶು, ಪಕ್ಷಿ, ಮಾನವರ ಸ್ನೇಹ | ತಂದೆ- ತಾಯಿ, ಪುತ್ರ ಬಂಧು ಬಾಂಧವರು ಪರಸ್ಪರ ಸ್ನೇಹದಿಂದ ಇರುವುದು | ೧೬೨ |
| ಪಾಪ ಕಾರ್ಯದಿಂದ | ಮಿಥ್ಯಾವ್ರತ, ಮಿಥ್ಯಾ ತಪಸ್ಸು | ೧೬೧ |
| ಧನವೃದ್ಧಿ | | ೧೬೨ |



| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಪಾಪಾನುಬಂಧಿ ಪುಣ್ಯಬಂಧ | ಮಿಥ್ಯಾರ್ಥ ಭಾವನೆಯ ಪುಣ್ಯ ಕಾರ್ಯ | ೧೬೮ |
| ಪುಣ್ಯಾನುಬಂಧಿ- ಪುಣ್ಯ | ದರ್ಶನ ಮೋಹನೀಯ ಕರ್ಮನಾಶ- ಪುಣ್ಯ ಕಾರ್ಯ | ೧೬೯ |
| ಪರಸ್ಪರ ಶಾಂತಿ ಪ್ರಾಪ್ತಿ | ವೀತರಾಗಿ ನಿರ್ಗ್ರಂಥ ಗುರುಗಳ ಉಪದೇಶ ಕೇಳುವುದು, ತನ್ನಾತ್ಮ ಕಲ್ಯಾಣ, ಪರಜೀವ ಆತ್ಮಕಲ್ಯಾಣ | ೧೮೦ |
| ಬೇಟೆಗಾರ/ ಬೇಡ | ಮಾಂಸ ಭಕ್ಷಕ/ ಮದ್ಯಪಾನಿ, ಧರ್ಮದ್ವೇಷಿ | ೧೨ |
| ಭಯಭೀತ | ರಾಜಧನ/ ಪರಸೊತ್ತು/ ಭೂತಪಿಶಾಚಿ ಸೊತ್ತು ಅಪಹರಣ | ೨೧ |
| ಬೆಕ್ಕು | ಆಹಾರಗಳ ಆಸೆ/ ಬಂಧು ಬಾಂಧವರ ವಸ್ತು ಅಪಹರಣ ವಿಚಾರ | ೬೩ |
| ಭಿಕ್ಷುಕ | ಧರ್ಮ ಕರ್ಮ ರಹಿತ/ ಮದ್ಯಮಾಂಸ ಭಕ್ಷಣೆ | ೧೦೬ |
| ಬುದ್ಧಿವಂತ | ದೀನ ರಕ್ಷಣೆ, ಅಸಮರ್ಥರಿಗೆ ಸಹಾಯ, ಹಸಿದವರಿಗೆ ಆಹಾರ, ಬಾಯಾರಿದವರಿಗೆ ಜಲ ನೀಡುವುದು | ೧೩೨ |
| ಭೋಗ ಭೂಮಿಜ | ಯೋಗಿಗಳಿಗೆ ಆಹಾರ ದಾನ, ದಾನಿಗಳನ್ನು ನೋಡಿ ಸಂತಸ ಪಡುವುದು | ೧೪೯ |
| ಮಲಮೂತ್ರಗಳಲ್ಲಿ ಜನನ | ಮಲಿನ ಆಹಾರ, ಮದ್ಯ, ಮಾಂಸ ಸೇವನೆ | ೮ |
| ಕುಟುಂಬದ ಮೇಲೆ ಅತಿಯಾದ ಮಮಕಾರ | ಇಂದ್ರಿಯ, ಕುದೇವ, ಕುಶಾಸ್ತ್ರ/ ಕುಗುರುಗಳ ಪರಮ ಭಕ್ತ | ೯ |
| ಮೋಸಗಾರ | ಮನದಲ್ಲಿ ಒಂದು, ಕಾರ್ಯದಲ್ಲಿ ಒಂದು ಮಾಡುವುದು | ೧೪ |
| ಮೂಕ | ಮಾಂಸ ಭಕ್ಷಣೆ/ ಗುರುನಿಂದನೆ | ೧೬ |
| ಮೂರ್ಖ | ಶಾಸ್ತ್ರ/ ಪಂಡಿತರ ನಿಂದನೆ/ ಗುರುಗಳಿಗೆ ಅಪಮಾನ, ಶಾಸ್ತ್ರಪಠಣದಲ್ಲಿ ಅಶ್ರದ್ಧೆ | ೨೪ |
| ಮೂಟೆ ಹೊರುವುದು | ಪಶುಗಳ ಮೇಲೆ ಅಧಿಕ ಭಾರ ಹೊರಿಸುವುದು | ೫೦ |
| ಮನೆ- ಜನರ ಹಿತವಾಗುವುದು | ಜೇನುಗೂಡು/ ಪಕ್ಷಿಗೂಡು ಹಾಳು ಮಾಡುವುದು | ೧೦೮ |
| ಮನುಷ್ಯ ಪರ್ಯಾಯ ಪ್ರಾಪ್ತಿ | ಸದಾ ದಾನ, ದೇವ ಪೂಜೆ, ಧರ್ಮಕಾರ್ಯ ನಿರತನಾಗಿರುವುದು | ೧೪೮ |
| ಮನೆಯಲ್ಲಿ ಮಂಗಲ ಕಾರ್ಯ | ತೀರ್ಥಂಕರರ ಪೂಜೆ, ಪಂಚ ಕಲ್ಯಾಣ ಮಹೋತ್ಸವ ಮಾಡಿಸುವುದು, ಜಿನೇಂದ್ರರ ಕೀರ್ತನೆ | ೧೬೮ |

| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಮಧುರ ವಚನ ಪ್ರಾಪ್ತಿ | ಜಿನಗುಣ ಸ್ತುತಿ, ಜಿನವಾಣಿ ಸ್ವರೂಪ ಶಾರದಾದೇವಿ ಸದಾಸೇವನೆ | ೧೬೯ |
| ಮನ, ವಚನ, ಕಾಯ, ಸರಳತೆ | ಶುದ್ಧಾತ್ಮ ಸ್ವರೂಪ ಅರಿತವರು, ರಾಗದ್ವೇಷ ಹೊಡೆದೋಡಿಸಿರುವವರ ಸಾನಿಧ್ಯ | ೧೮೭ |
| ಮನಃ ಪರ್ಯಾಯ ಜ್ಞಾನೋತ್ಪತ್ತಿ | ಧರ್ಮಧ್ಯಾನ, ತಪಶ್ಚರಣ, ಶುದ್ಧಾತ್ಮಚಿಂತನ, ರೂಪ, ರಸಾಸ್ವಾದನ, ರತ್ನತ್ರಯ ಆರಾಧನೆ, ಸಮತಾಭಾವ | ೧೮೮ |
| ರೋಗಿ | ರೋಗಿಗಳ ನಿಂದನೆ/ ಅಪಮಾನ/ ಔಷಧ ನೀಡದೆ ಇರುವುದು | ೧೮ |
| ರೋಗ ವಾಸಿಯಾಗದೇ ಇರುವುದು | ವೈದ್ಯರು ರೋಗಿಗಳಿಗೆ ರೋಗದ ಬಗ್ಗೆ ಭಯಪಡಿಸಿ ಹೆಚ್ಚಿನ ಹಣ ಪಡೆಯುವುದು, ಅಲ್ಪ ಬೆಲೆಯ ಔಷಧ ನೀಡುವುದು | ೬೭ |
| ರಾಜ ಭಿಕ್ಷುಕನಾಗುವುದು | ಧರ್ಮ-ಕರ್ಮ ರಹಿತ/ ಮಧು-ಮದ್ಯ-ಮಾಂಸ ಭಕ್ಷಣೆ ಮಾಡುವುದು | ೧೦೬ |
| ಲೋಕನಿಂದೆ | ಕೀರ್ತಿಗೆ ಹಣ ವ್ಯಯ/ ಮಿಥ್ಯಾ ತಪಸ್ವಿ ಪ್ರಶಂಸೆ | ೩೦ |
| ಲೋಕನಿಂದೆ | ದೇವ/ ಧರ್ಮ/ ಗುರುನಿಂದನೆ, ಪರಧನ ಅಪಹರಣ | ೮೬ |
| ವ್ಯವಹಾರಶೂನ್ಯ | ವ್ಯವಹಾರಚತುರರ ದ್ವೇಷ/ ನಿಂದನೆ | |
| ವಿಕಲತ್ರಯ/ ವಿಕಲಾಂಗ ಜೀವಿ ಜನನ | ಕ್ರಿಮಿ, ಕೀಟ, ಪ್ರಾಣಿಗಳ ಹಿಂಸೆ, ಬಂಧನದಲ್ಲಿಡುವುದು | ೫೩ |
| ವ್ಯಭಿಚಾರಿ | ವೇಶ್ಯೆ/ ದುರ್ಜನರ ಸಹವಾಸ | ೮೨ |
| ವೃಕ್ಷ | ದೇವ/ ನಿರ್ಗ್ರಂಥ ಗುರುಗಳಿಗೆ ವಂದಿಸದಿರುವುದು | ೧೦೧ |
| ವಿಪರೀತ ಬುದ್ಧಿ | ಪುಣ್ಯಶಾಲಿಗಳ/ ಜ್ಞಾನಿಗಳ ನಾಶಕ್ಕೆ ಪ್ರಯತ್ನ | ೧೦೫ |
| ವಾಗ್ಮಿ/ ವಾಚಾಳಿ | ವಿದ್ಯಾದಾನ, ಸರಸ್ವತಿ ಸೇವೆ, ಸದ್ಗುರು ಸೇವೆ, ಶಾಸ್ತ್ರಗ್ರಂಥ ದಾನ | ೧೫೭ |
| ವ್ಯವಹಾರಚತುರ | ವಿದ್ಯೆ, ಕಲೆಗಳಲ್ಲಿ ಚತುರರನ್ನು ಪ್ರಶಂಸಿಸುವುದು, ಯತಿಸೇವೆ ಮಾಡುವುದು, ವಿವೇಕ ಜ್ಞಾನಿಗಳನ್ನು ಪ್ರಶಂಸಿಸುವುದು | ೧೫೨ |
| ಶ್ರೇಷ್ಠ ಪದಾರ್ಥ/ ಸ್ತ್ರೀ ಇದ್ದೂ ಅನುಭವಿಸದೆಯಿರುವುದು | ಪರ ಪದಾರ್ಥ/ ಸ್ತ್ರೀ ಗಮನ | ೨೮ |
| ಶೀಲವ್ರತಭಂಗ | ಶೀಲವಂತರ ವ್ರತಭಂಗ, ನಿಂದನೆ | ೬೬ |
| ಶಕ್ತಿಹೀನ | ಬಡಪ್ರಾಣಿ ಹಿಂಸೆ, ಬಂಧನದಲ್ಲಿಟ್ಟು ಪೀಡಿಸುವುದು | ೧೧೦ |
| ಶೋಕರಹಿತ | ಬಿಂಬ ಪ್ರತಿಷ್ಠೆ/ ದೇವ/ ಧರ್ಮ/ ಗುರು, ಪೂಜೆ, ಸೇವೆ, ಧರ್ಮ ಪ್ರಭಾವನೆ, ಧರ್ಮೋತ್ಸವ ಕಂಡು ಆನಂದಪಡುವುದು | ೧೨೯ |
| ಶ್ರುತಜ್ಞಾನ ಪಾರಂಗತ | ಗುರು ಆಜ್ಞಾಪಾಲನೆ, ಸೇವೆ, ಸ್ತುತಿ, ಪ್ರಶಂಸೆ ಮಾಡುವುದು | ೧೬೫ |



| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಶೀಲವಂತ | ಶೀಲವಂತ ಸ್ತ್ರೀ ಪುರುಷರ ಸೇವೆ | ೧೬೬ |
| ಶಾಂತಿ-ಸಮಾಧಾನ | ವೀತರಾಗ ನಿರ್ಗ್ರಂಥ ಸಾಧು ಸೇವೆ, ಜಿನವಾಣಿ ಪ್ರಚಾರ, ದೇವ, ಶಾಸ್ತ್ರ, ಗುರುಸ್ತುತಿ ಸ್ತೋತ್ರ | ೧೭೦ |
| ಶ್ರೇಷ್ಠ/ ಪೂಜ್ಯ ಮಾನವ | ಸಕಲ ಜೀವಿಗಳ ಕ್ಷೇಮಕ್ಕೆ ಪ್ರಯತ್ನ, ಸಾಧು ಸಜ್ಜನರಲ್ಲಿ ವಿನಯ | ೧೬೭ |
| ಶುದ್ಧಾತ್ಮ ತನ್ಮಯ | ಹೃದಯದಲ್ಲಿ ಸದಾ ದಯಾರಸ, ಸಮಾಧಿ, ಧ್ಯಾನಫಲ | ೧೯೧ |
| ಸಂಸಾರದಲ್ಲಿ ಅನಾದರ | ದೇವ/ ಗುರು/ ಶಾಸ್ತ್ರಕ್ಕೆ ಅಪಮಾನ | ೫ |
| ಸಂಸಾರದಲ್ಲಿ ಸುಖಪಡದೆ ಇರುವುದು | ಪರರ ಅನ್ನ/ ಶಯನಕ್ಕೆ ವಿಘ್ನ, ಹಸಿದವರಿಗೆ ಅಪಮಾನ | ೨೬ |
| ಸ್ತ್ರೀ ಜನನ | ಸ್ತ್ರೀ ವೇಷದಲ್ಲಿ ಸಂತಸಪಡುವುದು | ೫೫ |
| ಸ್ಥಾವರ ಶರೀರ ಧಾರಣೆ | ದೇವರು/ ಧರ್ಮ/ ಗುರುನಿಂದನೆ/ ಕುದೇವ/ ಕುಗುರು/ ಕುಧರ್ಮ ಹೊಗಳಿಕೆ | ೫೬ |
| ಸಮ್ಯಜ್ಞಾನದಲ್ಲಿ ಪ್ರೀತಿಯಿಲ್ಲದಿರುವುದು | ಪರರಿಗೆ ದುರ್ವ್ಯಸನಕ್ಕೆ ಪ್ರಚೋದನೆ | ೭೦ |
| ಸಿಂಹ | ಪರರ ಕೊಲ್ಲುವ/ ಪ್ರಾಣಿ/ ಪಶುಪಕ್ಷಿ ಹಿಂಸೆ ಮಾಡುವ/ ಸದಾ ಮಾಂಸ ಭಕ್ಷಣೆಯ ಯೋಜನೆ | ೭೪ |
| ಸೊಳ್ಳೆ/ ನೊಣ | ದೇವ/ ಗುರುಗಳನ್ನು ಪ್ರತ್ಯಕ್ಷ ಸ್ತುತಿಸುವುದು, ಪರೋಕ್ಷದಲ್ಲಿ ನಿಂದಿಸುವುದು. | ೯೬ |
| ಸರ್ಪ | ಧರ್ಮದ ಸ್ವರೂಪ ತಿಳಿದೂ ವೈರ ಮಾಡುವುದು | ೯೭ |
| ಸಹಧರ್ಮ ವಿವಾದ | ದೇವ/ ಧರ್ಮ/ ಗುರುಗಳನ್ನು ಅಪಮಾನಿಸಿರುವುದು | ೧೦೫ |
| ಸತ್ಕಾರ್ಯ/ ಧನ ಹಾನಿ | ದಾನ, ಪೂಜೆ, ಜಪ, ತಪಗಳಲ್ಲಿ ಮನಸ್ಸಿಲ್ಲ | ೧೧೨ |
| ಸತ್ಪುತ್ರ ಪ್ರಾಪ್ತಿ | ತಮ್ಮ/ ಪರರ ಮಕ್ಕಳಿಗೆ ಬುದ್ಧಿ ಹೇಳಿ ಸನ್ಮಾರ್ಗ ತೋರುವುದು, ತಂದೆ-ತಾಯಿಯರಿಗೆ ಭಕ್ತಿ, ವಿನಯ ತೋರಿಸುವುದು. | ೧೨೨ |
| ಸುಖೀ ಕುಟುಂಬ | ಪರ ಕುಟುಂಬಕ್ಕೆ ಶಾಂತಿ ಸಮಾಧಾನ ಹೇಳುವುದು, ಧನ-ಧಾನ್ಯ ಸಹಾಯ ಮಾಡುವುದು | ೧೨೭ |
| ಸಂಯಮಿ | ಮಾತಾಪಿತೃ ಸೇವೆ, ಸಜ್ಜನರ ಸಹವಾಸ | ೧೨೮ |
| ಸಮತಾಭಾವ | ಶ್ರಾವಕರಲ್ಲಿ ವಿನಯ, ಜಿನದೇವ, ಗುರು, ಸಾಧು-ಸಜ್ಜನರನ್ನು ಕಂಡು ಸಂತಸಪಡುವುದು | ೧೫೩ |
| ಸ್ವತಂತ್ರ | ನಿರಾಶ್ರಿತರಿಗೆ ಆಶ್ರಯ, ಹಸಿದವರಿಗೆ ಅನ್ನ, ದೀನರಿಗೆ ವಸ್ತ್ರ, ಮಿಥ್ಯಾಜ್ಞಾನಿಗಳ ಮಿಥ್ಯಾನಿವಾರಣೆ; ಮೋಕ್ಷ ತೋರುವುದು | ೧೫೮ |

| ಈ ಜನ್ಮದ ಫಲ | ಹಿಂದಿನ ಕರ್ಮ | ಶ್ಲೋಕ ಸಂ. |
|---|---|---|
| ಸುಂದರ ಶರೀರ ಧಾರಣೆ | ದೇವರಲ್ಲಿ ಭಕ್ತಿ, ಮುನಿಗಳಲ್ಲಿ ವಿನಯ, ಪರರ ಸುಂದರ ಶರೀರ ನೋಡಿ ಆನಂದಪಡುವುದು | ೧೩೯ |
| ಸತ್ಕಾರಶಾಲಿ | ದೇವ, ಶಾಸ್ತ್ರ ಗುರು, ಗ್ರಂಥಗಳ ಪೂಜೆ, ಪಠಣ | ೧೪೦ |
| ಸಹೋದರರಲ್ಲಿ ಪ್ರೇಮ ಭಾವನೆ | ಸಂಸಾರದಲ್ಲಿ ಶಾಂತಿ ಸ್ಥಾಪನೆ, ಅಣ್ಣ ತಮ್ಮಂದಿರಲ್ಲಿ ಸ್ನೇಹ, ಬಂಧು ಗಳಲ್ಲಿ ಸ್ನೇಹ | ೧೪೨ |
| ಸತ್ಪುತ್ರ ಜನನ ಲಕ್ಷಣ | ಮಾತಾ-ಪಿತೃ ಹೃದಯ ಪ್ರಸನ್ನ, ನಿರ್ಮಲ ವಿಚಾರ, ದಾನ, ಪೂಜೆ, ಶುಭಕಾರ್ಯ ಪ್ರವೃತ್ತಿ | ೧೪೩ |
| ಸತ್ಕವಿ | ವೀತರಾಗ ದೇವರ ಕಥೆ ಹೇಳುವುದು, ಕವಿ, ಧರ್ಮಗುರುಗಳ ವರ್ಣನೆ ಮಾಡುವುದು | ೧೫೩ |
| ಸ್ಥಿರ ಜೀವನ ಪ್ರಾಪ್ತಿ | ದೀನ ದಲಿತರ ರಕ್ಷಣೆ, ಪಶು, ಪ್ರಾಣಿ ಪಕ್ಷಿಗಳಿಗೆ ಆಹಾರ ನೀಡಿ ರಕ್ಷಣೆ ಮಾಡುವುದು | ೧೫೭ |
| ಸತ್ಯಸಂಧ ಜೀವನ | ಧರ್ಮಾತ್ಮರಿಗೆ ಆಹಾರ ದಾನ, ಪ್ರಶಂಸೆ ಮಾಡುವುದು | ೧೫೯ |
| ಸರ್ವರಿಗೆ ಪ್ರಿಯ | ಧರ್ಮಾತ್ಮರಲ್ಲಿ ಸ್ನೇಹ, ಅನುರಾಗ, ತೀರ್ಥಂಕರರು/ ಮುನಿ ಗಳಲ್ಲಿ ಭಕ್ತಿ/ ದಶಲಕ್ಷಣ ಧರ್ಮಗಳಲ್ಲಿ ಪ್ರೀತಿ | ೧೬೭ |
| ಸರ್ವತ್ರ ಕೀರ್ತಿ | ಮಾನ, ಅಪಮಾನ ಲೆಕ್ಕಿಸದೆ ಸಕಲ ಜೀವಿಗಳ ಹಿತಕ್ಕೆ ಪ್ರಯತ್ನ | ೧೬೫ |
| ಸುಂದರ ಶರೀರ ಪ್ರಾಪ್ತಿ | ಮುನಿಸೇವೆ, ಧರ್ಮಧ್ಯಾನ, ಶುದ್ಧಧ್ಯಾನ, ಕಠಿಣ ತಪಸ್ಸು, ಹತ್ತು ಧರ್ಮ, ಮೂರು ಗುಪ್ತಿ, ಐದು ಸಮಿತಿ, ನಿರ್ದೋಷ ಪಾಲನೆ ಪಾಪನಾಶ | ೧೬೬ |
| ಸರ್ವಾರ್ಥ ಸಿದ್ಧಿ ಅಹಮಿಂದ್ರ | ಧರ್ಮದಲ್ಲಿ ಅನುರಾಗ, ಪಂಚಪರಮೇಷ್ಠಿ ಭಕ್ತಿ, ಧರ್ಮ, ಶುಕ್ಲಧ್ಯಾನ | ೧೮೦ |
| ಸ್ವಾನುಭವ ಸ್ವಾಮಿ | ತನ್ನಾತ್ಮನ ಶುದ್ಧಸ್ವರೂಪದಲ್ಲಿ ಸಂತುಷ್ಟರಾದ ಮುನಿ ಪ್ರಶಂಸೆ, ದಶ ಧರ್ಮಗಳ ಪ್ರಾಪ್ತ ಮಾಡಿಕೊಳ್ಳುವ ಆತ್ಮನ ಶುದ್ಧಸ್ವರೂಪ ಚರ್ಚೆ | ೧೮೬ |
| ಹೊಟ್ಟೆಬಾಕ | ಪಶು ಆಹಾರ ಕಳ್ಳತನ/ ಸದಾಕಾಲ ಆಹಾರ ಸೇವನೆ/ ದಾನ ಮಾಡದೆ ಇರುವುದು | ೪೭ |
| ಹಸು | ಅಭಕ್ಷ್ಯ ಭಕ್ಷಣೆ/ ಮಂದ ಬುದ್ಧಿ | ೭೭ |
| ಹುಚ್ಚ (ಮತಿ ಭ್ರಾಂತಿ) | ನೀಚ, ಮಂತ್ರ-ತಂತ್ರ ಪ್ರಯೋಗ, ಹುಚ್ಚರೊಂದಿಗೆ ಜಗಳ | ೮೨ |
| ಜ್ಞಾನವ್ರತಿ | ವ್ರತ, ಉಪವಾಸ, ಜಿನಪೂಜೆ, ಸತ್ಪಾತ್ರದಾನ ಮಾಡುವವರನ್ನು ಪ್ರಶಂಸಿಸುವುದು | ೧೪೧ |

# ಪಂಡಿತರತ್ನ ಎತ್ತೂರು ಶಾಂತಿರಾಜ ಶಾಸ್ತ್ರಿಗಳು

ಜನನ : ೧೮೮೮ ಮರಣ : ೧೯೫೭

ಎತ್ತೂರು ಶಾಂತಿರಾಜಶಾಸ್ತ್ರಿಗಳು ಆದರ್ಶ ಧಾರ್ಮಿಕ ಪುರುಷ, ಸದಾಚಾರ ಸಂಪನ್ನ, ನಿಗರ್ವಿ, ನಿರಸೂಯ, ಬಹುಭಾಷಾವಿದ, ಸುಸಂಸ್ಕೃತ, ಸರಸ ಸಜ್ಜನಿಕೆಯ ಸಾಕಾರಮೂರ್ತಿ, ಸಮಾಜಸೇವಕ, ಶ್ರೇಷ್ಠ ವಿದ್ವಾಂಸ, ಶುದ್ಧ, ನಿರ್ಮಲ, ಪವಿತ್ರ ರೀತಿಯಲ್ಲಿ ಬಾಳಿದವರು. ಹೆಸರಿಗಾಗಿ, ಹಣಕ್ಕಾಗಿ, ಸ್ವಾರ್ಥಕ್ಕಾಗಿ ಎಂದೂ ಬಾಳಿದವರಲ್ಲ. ಅವರ ಜೀವನವನ್ನು ಸಮಾಜ ಹಾಗೂ ಸಾಹಿತ್ಯ ಸೇವೆಗೆಂದೇ ಮುಡುಪಾಗಿಟ್ಟು ದುಡಿದವರು, ಗುರಿಯತ್ತ ನಡೆದವರು. ಅವರ ಕಾರ್ಯಕ್ಷೇತ್ರ ವಿಶಾಲವಾದದ್ದು, ಸಾಹಿತ್ಯ ಸೇವೆ ಅಪಾರವಾದುದು, ಅತಿಶಯವಾದುದು. ಧರ್ಮ, ನೀತಿ, ಸ್ತೋತ್ರ, ಸಿದ್ಧಾಂತ, ಆಚಾರ, ಪೂಜಾ ಪಾಠ, ಸಾಹಿತ್ಯ - ಹೀಗೆ ಇವರ ಕೃತಿಗಳ ಹರವು, ಇವು ಈಗ ದೊರೆತಿರುವಂತೆ ೫೫ ಕ್ಕೂ ಮೀರಿವೆ; ಇವರ ಭಾಷಣಗಳು ಮತ್ತು ಲೇಖನಗಳು ೭೭ ಕ್ಕೂ ಮೀರಿವೆ. ಇವರ ಕೃತಿಶ್ರೇಣಿಯಲ್ಲಿ ಮಹಾಮೇರುಕೃತಿ ಆಚಾರ್ಯ ಜಿನಸೇನ - ಗುಣಭದ್ರರಿಂದ ವಿರಚಿತವಾದ **'ಮಹಾ ಪುರಾಣ'**. ಇಪ್ಪತ್ತು ಸಾವಿರ ಸಂಸ್ಕೃತ ಶ್ಲೋಕಗಳುಳ್ಳ ಈ ಮೇರುಕೃತಿಯನ್ನು ಸರಳ ಹೊಸಗನ್ನಡದಲ್ಲಿ 'ಭಾವಾರ್ಥ' ವನ್ನು ಮೂಲದ ಯಾವುದೊಂದು ಶಬ್ದಾರ್ಥವನ್ನೂ ಬಿಡದೆ ಬರೆದು, ಕನ್ನಡದ ಜನತೆಗೆ ನೀಡಿ ಮಹೋಪಕಾರ ಮಾಡಿದ್ದಾರೆ. ಈ ಕೃತಿ ಕನ್ನಡದ ಸಾಹಿತ್ಯಾಭ್ಯಾಸಿಗಳಿಗೆ ಒಂದು **ಆಕರ** ಗ್ರಂಥ. ಹೀಗೆ ಸಂಸ್ಕೃತ, ಪ್ರಾಕೃತ, ಕನ್ನಡ ಪಾಂಡಿತ್ಯದ ಪ್ರತಿಭೆಯಿಂದ ಕನ್ನಡ ಸಾಹಿತಿಯಾಗಿ, ಸಾಹಿತ್ಯ ಪರಿಚಾರಕರಾಗಿ ಅಮೋಘ ಸೇವೆ ಸಲ್ಲಿಸಿದವರು. 'ವಿಶ್ವಬಂಧು' ಹಾಗೂ 'ವಿವೇಕಾಭ್ಯುದಯ' ಪತ್ರಿಕೆಗಳ ಜನಕರು. ಎತ್ತೂರು ಶಾಂತಿರಾಜಶಾಸ್ತ್ರಿಗಳು ಕನ್ನಡ ಸಾಹಿತ್ಯಪರಿಷತ್ತಿನಿಂದ ಗೌರವಿಸಲ್ಪಟ್ಟ - ಬಹುಶಃ ಏಕೈಕ ಸಂಸ್ಕೃತ ವಿದ್ವಾಂಸರು. ಇವರ ಅಪಾರ ವಿದ್ವತ್ತಿನ ಕೀರ್ತಿಗಾಗಿ ಗುರುಮನೆಗಳಿಂದ ಸಂದ ಗೌರವಗಳಲ್ಲದೆ, ಅರಮನೆಯಿಂದಲೂ ಮೊದಲು ಆಸ್ಥಾನ ವಿದ್ವಾನರೆಂದೂ, ಅನಂತರ ಆಸ್ಥಾನ ಮಹಾವಿದ್ವಾನರೆಂದೂ ಗೌರವಿಸಲ್ಪಟ್ಟು **'ಪಂಡಿತರತ್ನ'** ಎಂಬ ಬಿರುದನ್ನೂ ಪಡೆದು ಸಮಾಜದ ಪ್ರೀತಿ, ಆದರ, ಗೌರವಗಳಿಗೆ ಪಾತ್ರರಾದ ಹಿರಿಯ ಆದರ್ಶ ವ್ಯಕ್ತಿ.